## ನೀನಾಸಮ್ ರಂಗಶಿಕ್ಷಣ ಕೇಂದ್ರ

ಹೆಗ್ಗೋಡು, ಸಾಗರ, ಕರ್ನಾಟಕ ೫೭೭ ೪೧೭

### ಡಿಪ್ಲೋಮಾ ಇನ್ ಥಿಯೇಟರ್ ಆರ್ಟ್ಸ್

### ಪ್ರಕಟಣೆ

ಕರ್ನಾಟಕ ರಾಜ್ಯ ಸರ್ಕಾರದ ಮಾನ್ಯತೆ ಪಡೆದಿರುವ ನೀನಾಸಮ್ ರಂಗಶಿಕ್ಷಣ ಕೇಂದ್ರ ೨೦೧೨-೧೩ನೇ ಸಾಲಿನ ಶಿಕ್ಷಣಕ್ಕೆ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುತ್ತದೆ. ಪ್ರವೇಶಕ್ಕೆ ಕನಿಷ್ಠ ವಿದ್ಯಾರ್ಹತೆ ಎಸ್.ಎಸ್.ಎಲ್.ಸಿ. ಇರಬೇಕು. ಪದವೀಧರರಿಗೆ ಆದ್ಯತೆ ಇರುತ್ತದೆ. ರಂಗಭೂಮಿಯಲ್ಲಿ ಆಸಕ್ತಿಯಿದ್ದು, ಸ್ವಲ್ಪಮಟ್ಟಿನ ಅನುಭವ ಇರಬೇಕಾದ್ದು ಅಗತ್ಯ. ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಊಟ, ವಸತಿ ವ್ಯವಸ್ಥೆ ಇದ್ದು ಹದಿನೈದು ಮಂದಿಗೆ ವಿದ್ಯಾರ್ಥಿವೇತನ ದೊರೆಯುತ್ತದೆ.

ಕೇಂದ್ರದಲ್ಲಿ ವಿದ್ಯಾರ್ಥಿಗಳಿಗೆ ರಂಗಕಲ್ಪನೆ, ರಂಗ ಇತಿಹಾಸ, ನಾಟಕ ಇತಿಹಾಸ, ರಂಗನಟನೆ, ರಂಗಸಿದ್ಧತೆ, ರಂಗವ್ಯವಸ್ಥೆ ಮುಂತಾಗಿ ವಿಸ್ತಾರವಾದ ಸೈದ್ಧಾಂತಿಕ ಹಾಗೂ ಪ್ರಾಯೋಗಿಕ ಶಿಕ್ಷಣ ನೀಡಲಾಗುತ್ತದೆ. ಕೇಂದ್ರದ ನುರಿತ ಅಧ್ಯಾಪಕರುಗಳಲ್ಲದೆ ಹೊರಗಿನ ತಜ್ಞರನ್ನು ಕರೆಸಿ ಸಾಕಷ್ಟು ಪ್ರಬುದ್ಧ ಶಿಕ್ಷಣ ಕೊಡಲಾಗುತ್ತದೆ. ಒಳ್ಳೆಯ ಗ್ರಂಥ ಭಂಡಾರ ಹಾಗೂ ದೃಶ್ಯಶ್ರವ್ಯ ಪರಿಕರಗಳ ಅನುಕೂಲತೆಯಿದೆ. ವಿದ್ಯಾರ್ಥಿ ವಿದ್ಯಾರ್ಥಿನಿಯರು ಪ್ರತಿದಿನ ಸುಮಾರು ೧೨ ಗಂಟೆಗಳಷ್ಟು ಕಾಲ ಅಭ್ಯಾಸದಲ್ಲಿ ತೊಡಗಿರಬೇಕಾಗುತ್ತದೆ.

ಪ್ರಾಸ್ಪೆಕ್ಟಸ್ ಮತ್ತು ಪ್ರವೇಶ ಪತ್ರಕ್ಕೆ ರೂ. ೨೦೦-೦೦ ಕಳಿಸಿ ಬರೆದುಕೊಳ್ಳಬಹುದು. ಪ್ರವೇಶ ಪತ್ರವನ್ನು ಭರ್ತಿಮಾಡಿ ೨೩-೬-೨೦೧೨ ಶನಿವಾರದ ಒಳಗೆ ನೀನಾಸಮ್ ರಂಗಶಿಕ್ಷಣ ಕೇಂದ್ರ, ಹೆಗ್ಗೋಡು, ಸಾಗರ, ಶಿವಮೊಗ್ಗ ೫೭೭ ೪೧೭ ಈ ವಿಳಾಸಕ್ಕೆ ತಲುಪುವಂತೆ ಕಳಿಸಬೇಕು. ದಿನಾಂಕ ೩೦ ಜೂನ್ ಮತ್ತು ೧ ಜುಲೈ ೨೦೧೨ ಶನಿವಾರ ಮಧ್ಯಾಹ್ನ ೧ ಗಂಟೆಯಿಂದ ಭಾನುವಾರ ಸಂಜೆ ೫ ಗಂಟೆಯವರೆಗೆ ನಡೆಯುವ ಆಯ್ಕೆಯ ಸಂದರ್ಶನಕ್ಕೆ ಅಭ್ಯರ್ಥಿಗಳು ತಮ್ಮ ವೆಚ್ಚದಲ್ಲೇ ಹೆಗ್ಗೋಡಿಗೆ ಬಂದು ಹಾಜರಿರಬೇಕು.

ಹೆಗ್ಗೋಡು — ಪ್ರಾಂಶುಪಾಲರು

೨೦-೦೪-೨೦೧೨ — ನೀನಾಸಮ್ ರಂಗಶಿಕ್ಷಣ ಕೇಂದ್ರ

# ಹುಚ್ಚಪ್ಪ ಮಾಸ್ತರರ ಮಾದರಿ

ಅಕ್ಷರ ಕೆ.ವಿ

*ನೀನಾಸಮ್ ಸಂಸ್ಥೆಯ 'ಸಂಗ್ಯಾಬಾಳ್ಯಾ' ಪ್ರಯೋಗದಲ್ಲಿ ಪ್ರಮುಖ ಹಾಡುಗಾರರಾಗಿದ್ದು ನಮ್ಮ ಹಲವು ನಾಟಕಗಳಲ್ಲಿ ಪಾತ್ರವಹಿಸಿದ್ದ ಶ್ರೀ ಎನ್. ಹುಚ್ಚಪ್ಪ ಮಾಸ್ತರ ಅವರಿಗೆ ೭೫ ವರ್ಷಗಳು ತುಂಬುತ್ತಿವೆ. ಈ ಸಂದರ್ಭದಲ್ಲಿ ಇದೇ ಮೇ ೨೦೧೨ರಲ್ಲಿ ಅವರಿಗೆ ಅಭಿನಂದನಾ ಗ್ರಂಥವೊಂದನ್ನು ಸಮರ್ಪಿಸಲಾಗುತ್ತಿದ್ದು, ಅದಕ್ಕಾಗಿ ಬರೆದ ಲೇಖನ ಇದು. ನೀನಾಸಮ್ ಸಂಸ್ಥೆಯ ಅಭಿಮಾನದ ಕುರುಹಾಗಿ ಈ ಲೇಖನವನ್ನಿಲ್ಲಿ ಮರುಮುದ್ರಿಸಲಾಗುತ್ತಿದೆ.*

ನಾಲ್ಕು ದಶಕಗಳ ಹಿಂದೆ ನನ್ನ ತಂದೆ ಕೆ.ವಿ. ಸುಬ್ಬಣ್ಣನವರ ನಿರ್ದೇಶನದಲ್ಲಿ ಪ್ರದರ್ಶನಗೊಂಡಿದ್ದ ನಮ್ಮ ನೀನಾಸಮ್ ತಂಡದ ಸಂಗ್ಯಾಬಾಳ್ಯಾ ನಾಟಕವನ್ನೂ ಮತ್ತು ಆ ಪ್ರಯೋಗದಲ್ಲಿ ಮುಖ್ಯ ಗಾಯಕರಾಗಿ ಪಾಲ್ಗೊಂಡಿದ್ದ ಹುಚ್ಚಪ್ಪ ಮಾಸ್ತರರನ್ನೂ ನಾನು ಮರೆಯುವಂತೆಯೇ ಇಲ್ಲ.

ಕಾರಣ ಹಲವಾರು: ಮೊದಲನೆಯದಾಗಿ, ನನ್ನ ವಯಸ್ಸಿನ ಹಲವರಿಗೆ ಆ ಸಂಗ್ಯಾಬಾಳ್ಯಾ ಪ್ರಯೋಗವು ನಮ್ಮ ನಾಟಕದ ಬದುಕಿನ ಪ್ರಮುಖವಾದೊಂದು ಘಟ್ಟ; ರಂಗಮಾಧ್ಯಮಕ್ಕೆ ಸಂಬಂಧಿಸಿದ ಮುಂದಿನ ನಮ್ಮ ಎಲ್ಲ ಬಗೆಯ ಕಲಿಕೆಗಳಿಗೆ ಆ ಪ್ರಯೋಗವು ಪ್ರಾಥಮಿಕ ಅಸ್ತಿವಾರ. ಮಾತ್ರವಲ್ಲ, ನೀನಾಸಮ್ ಸಂಸ್ಥೆಯ ಬದುಕಿನಲ್ಲೂ ಈ ಪ್ರಯೋಗವು ಒಂದು ಮಹತ್ತ್ವದ ಮೈಲಿಗಲ್ಲು. ೧೯೭೦ರ ದಶಕದ ಆ ಮೊದಲ ವರ್ಷಗಳಲ್ಲಿ ಶಿವರಾಮಕಾರಂತ ರಂಗಮಂದಿರವೆಂಬ ಬೃಹತ್ ಕಟ್ಟಡವನ್ನು ನಿರ್ಮಿಸಿಕೊಂಡಿದ್ದ ನಮ್ಮ ತಂಡವು ಅದಕ್ಕಾಗಿ ವ್ಯಯಿಸಿದ ಲಕ್ಷ ಚಿಲ್ಲರೆ ಹಣವನ್ನು ಅನುದಾನ-ದಾನಿಗಳಿಂದ ಕೂಡಿಸಲಿಕ್ಕಾಗದೆ, ಕರ್ನಾಟಕ ಬ್ಯಾಂಕಿನಲ್ಲಿ ಇಪ್ಪತ್ತೈದು ಸಾವಿರ ರೂಪಾಯಿ ಸಾಲ ಮಾಡಿಕೊಂಡಿತ್ತು; ಮತ್ತು, ಅದನ್ನು ಸೀಮಿತ ಅವಧಿಯಲ್ಲಿ ತೀರಿಸಬೇಕಾದ ಒತ್ತಡದಲ್ಲಿ ಸಿಲುಕಿತ್ತು. ಅಂಥ ಸನ್ನಿವೇಶದಲ್ಲಿ ನಮಗೆ, ಆಗಷ್ಟೇ ತಯಾರಾದ ಈ ಸಂಗ್ಯಾಬಾಳ್ಯಾ ಪ್ರಯೋಗವು ಪ್ರಯೋಜನವಾಗುವ ಹಾಗೆ ಕಂಡಿತು. ಯಾವ ಊರಿನ ಯಾವ ರೀತಿಯ ಜನರಾದರೂ ನೋಡಿ ಖುಶಿಪಡಬಹುದಾದ ಈ ನಾಟಕವನ್ನು ಹಲವೆಡೆ ಪ್ರದರ್ಶನ ಮಾಡಿ, ಅದರಿಂದ ಉಳಿಯುವ ಹಣದಲ್ಲಿ

ಸಾಲ ತೀರಿಸ ಬಹುದಲ್ಲವೆ? – ಎಂದು ಆಗ ನಮ್ಮ ತಂಡದಲ್ಲೊಬ್ಬರು ಉಪಾಯ ಮಾಡಿದರು. ಸರಿ, ಆ ಉಮೇದಿನಲ್ಲಿ ನಾವು ನಮಗೆ ಪರಿಚಯವಿದ್ದ ಬೇರೆ ಊರಿನ ಆಸಕ್ತರನ್ನೆಲ್ಲ ಸಂಪರ್ಕಮಾಡಿ, ಸಾಧ್ಯವಾದಷ್ಟು ಕಡೆ ಇದರ ಪ್ರದರ್ಶನ ಮಾಡಲು ಕೈಹಚ್ಚಿದೆವು. ಇದರಿಂದ ನೀನಾಸಮ್‌ನ ಸಾಲವು ಸಂಪೂರ್ಣ ತೀರಲಿಲ್ಲವಾದರೂ ನಾವು ಊಹಿಸಿರದಿದ್ದ ಬೇರೆ ಬಗೆಯ ಅನುಕೂಲಗಳು ಉಂಟಾದವು – ನಮ್ಮ ತಂಡದ ಈ ಪ್ರದರ್ಶನವು ಹತ್ತಾರು ಊರುಗಳಲ್ಲಿ ಮೆಚ್ಚುಗೆ ಗಳಿಸಿ ಮತ್ತಷ್ಟು ಪ್ರದರ್ಶನಗಳನ್ನು ಕಾಣುತ್ತ ಪ್ರಸಿದ್ಧವಾಗುತ್ತ ನಡೆಯಿತು; ಮತ್ತು, ಇದರಿಂದಲೇ ನಮ್ಮ ತಂಡದ ಹೆಸರು ರಾಜ್ಯವ್ಯಾಪ್ತಿಯನ್ನು ಪಡೆಯಿತು. ಹಾಗೆಯೇ, ಈ ಪ್ರದರ್ಶನಗಳ ಜತೆಗೇ ಇದರಲ್ಲಿ ಕೈಹಾಕಿಕೊಂಡಿದ್ದ ನಾವೆಲ್ಲ ಬಗೆಬಗೆಯ ನಾಟಕ ಮಾಡುವ, ಮಾಡಿಸುವ ಹಾಗೂ ಸಂಘಟಿಸುವ ಪಾಠಗಳನ್ನು ಕಲಿಯಲಾರಂಭಿಸಿದೆವು; ಎಷ್ಟರಮಟ್ಟಿಗೆಂದರೆ, ಹತ್ತಾರು ವರ್ಷಗಳ ಬಳಿಕ ನಾವು ಆರಂಭಿಸಿದ ತಿರುಗಾಟ ಯೋಜನೆಯ ಕೆಲವು ಹೊಳಹುಗಳು ರೂಪುಗೊಂಡಿದ್ದು ಈ ಸಂಗ್ಯಾಬಾಳ್ಯಾದ ತಿರುಗಾಟಗಳ ಮೂಲಕವೇ. ನನ್ನಂಥ ಕೆಲವರ ವೈಯಕ್ತಿಕ ರಂಗಬದುಕಿನ ಮತ್ತು ನೀನಾಸಮ್ ಸಂಸ್ಥೆಯ ಬೆಳವಣಿಗೆಯ ಇಂಥ ಆಯಕಟ್ಟಿನ ಸಂದರ್ಭದಲ್ಲಿ ಹುಚ್ಚಪ್ಪ ಮಾಸ್ತರರು ನಮ್ಮೊಡನೆ ಇದ್ದರೆಂಬುದು ನಮ್ಮೊಳಗೆ ಅವರ ನೆನಪನ್ನು ಗಟ್ಟಿಯಾಗಿ ಕೊರೆದು ನಿಲ್ಲಿಸಿದೆ.

ಈ ಸಂಗ್ಯಾಬಾಳ್ಯಾ ನಾಟಕವನ್ನು ಮಾಡಿಸಬೇಕೆಂಬ ಯೋಜನೆ ತನಗೆ ಬಂದಿದ್ದೇ ಈ ಹುಚ್ಚಪ್ಪ ಮಾಸ್ತರರಿಂದ – ಎಂದು ನನ್ನ ತಂದೆ ನನಗೊಮ್ಮೆ ಹೇಳಿದ್ದರು. ಆ ಕಾಲದಲ್ಲಿ ಯಾವುದೋ ಒಂದು ಸಮಾರಂಭದಲ್ಲಿ ಹುಚ್ಚಪ್ಪ ಮಾಸ್ತರರ ಹಾಡುಗಾರಿಕೆಯನ್ನು ಕೇಳಿದ್ದ ನನ್ನ ತಂದೆ, ಅವರ ಭಾಗವತಿಕೆಯಿರುವ ಯಾವುದಾದರೊಂದು ನಾಟಕವನ್ನು ನೀನಾಸಮ್‌ನಿಂದ ಮಾಡಿಸಬೇಕೆಂದು ಯೋಚಿಸಿದ್ದರಂತೆ. ಅಕಸ್ಮಾತ್ತಾಗಿ, ಅದೇ ಹೊತ್ತಿಗೆ, ಬೆಳಗಾವಿ ಜಿಲ್ಲೆಯ ಗೋಕಾಕದ ಕಡೆಯಿಂದ ಕಬಾಡಗಿ ಎಂಬವರ ಒಂದು ರಂಗತಂಡವು ಹೆಗ್ಗೋಡಿಗೆ ಬಂದು ಸಂಗ್ಯಾಬಾಳ್ಯಾ ಪ್ರದರ್ಶನವನ್ನು ಮಾಡಿತು. ಆಗ ಇದೇ ನಾಟಕ ಮಾಡಿಸಬೇಕೆಂದು ಯೋಚಿಸಿ, ಹುಚ್ಚಪ್ಪ ಮಾಸ್ತರರನ್ನೂ ಮತ್ತು ಇನ್ನೂ ಇಬ್ಬರು ನಟರನ್ನೂ ಕಬಾಡಗಿಯವರ ಊರಿಗೆ ಕಳಿಸಿ ಅವರ ತಂಡದವರಿಂದ ತರಬೇತಿ ಕೊಡಿಸಲಾಯಿತು. ಬಳಿಕ, ಹುಚ್ಚಪ್ಪ ಮಾಸ್ತರರು, ಅಲ್ಲಿ ಕಲಿತ ಹಾಡುಗಳನ್ನೂ ಮತ್ತು ಬೇರೆಡೆ ಸಂಗ್ರಹಿಸಿದ ಕೆಲವು ಮಟ್ಟುಗಳನ್ನೂ ಕೂಡಿಸಿ ಇದರ ಮೇಳಗಾಯನವನ್ನು ನಮ್ಮ ತಂಡದ ಹಲವರಿಗೆ ಅಭ್ಯಾಸ ಮಾಡಿಸಿದರು. ಅದಾಗಿ ಸುಮಾರು ಹತ್ತು-ಹದಿನೈದು ವರ್ಷಗಳಲ್ಲಿ ಈ ನಾಟಕದ ಐವತ್ತಕ್ಕೂ ಮಿಕ್ಕ ಸಂಖ್ಯೆಯ ಪ್ರದರ್ಶನಗಳು ಕರ್ನಾಟಕದಾದ್ಯಂತ – ಹೊರನಾಡುಗಳಲ್ಲೂ ಕೂಡ – ನಡೆಯುತ್ತಹೋದವು. ಆ



ಕಾಲದಲ್ಲಿ ಈ ನಾಟಕದ ಪ್ರಯೋಗಗಳು ಎಷ್ಟು ವ್ಯಾಪಕವಾಗಿ ಮತ್ತು ಸತತವಾಗಿ ನಡೆದವೆಂದರೆ, ಈ ನಾಟಕದ ಹಲವು ಪಾತ್ರಧಾರಿಗಳು ಮತ್ತು ಮೇಳಗಾಯಕರು ಪ್ರದರ್ಶನದಿಂದ ಪ್ರದರ್ಶನಕ್ಕೆ ಬದಲಾಗುತ್ತಲೇ ಹೋದರು; ಹೇಳಿಕೇಳಿ ಅದು ಮಾತುಗಳಿಲ್ಲದ ಗೀತನಾಟಕವಾಗಿದ್ದರಿಂದ ಹಾಗೆ ಬದಲಾಗುವುದು ಸುಲಭಸಾಧ್ಯವೂ ಆಗಿತ್ತು. ಮಾತ್ರವಲ್ಲ, ಆ ನಾಟಕದ ರಂಗಸಜ್ಜಿಕೆ-ವಿನ್ಯಾಸವೇ ಮೊದಲಾಗಿ ಅದರ ಪ್ರಯೋಗಾಂಗಗಳಲ್ಲೂ ಸಾಕಷ್ಟು ಬದಲಾವಣೆ ಆಗುತ್ತಬಂತು. ಆದರೆ, ಮೊದಲ ಪ್ರಯೋಗದಿಂದ ಕಡೆಯ ಪ್ರದರ್ಶನದವರೆಗೂ ಬದಲಾಗದೆ ಉಳಿದವರೆಂದರೆ – ಕೆಲವೇ ಮುಖ್ಯ ನಟರು; ಒಬ್ಬಿಬ್ಬರು ಮೇಳಗಾಯಕರು ಮತ್ತು ಭಾಗವತರಾದ ಹುಚ್ಚಪ್ಪ ಮಾಸ್ತರರು.

ಈ ನಾಟಕದ ಹಲವಾರು ಪ್ರದರ್ಶನಗಳಾದರೂ ಕೂಡ – ಮತ್ತು ಈ ಪ್ರದರ್ಶನಗಳ ಮೂಲಕ ಸುಮಾರು ಮೂವತ್ತಕ್ಕೂ ಹೆಚ್ಚು ಜನ ಬೇರೆಬೇರೆ ಪ್ರದರ್ಶನಗಳಲ್ಲಿ ಮೇಳಗಾಯಕರಾಗಿ ಹುಚ್ಚಪ್ಪನವರ ಜತೆಗೂಡಿ ಅನುಭವ ಪಡೆದುಕೊಂಡರೂ ಕೂಡ – ಮಾಸ್ತರರಿಲ್ಲದೆ ಈ ನಾಟಕದ ಒಂದೂ ಪ್ರದರ್ಶನ ಆಗಲಿಲ್ಲ; ಆಗುವುದಕ್ಕೂ ಸಾಧ್ಯವಿರಲಿಲ್ಲ. ಅದಕ್ಕೆ ಕಾರಣವೇನೆಂಬುದನ್ನು ಈ ಪ್ರಯೋಗವನ್ನು ನೋಡಿದವರಾರಿಗೂ ಬಿಡಿಸಿ ಹೇಳಬೇಕಾದ ಅಗತ್ಯವಿಲ್ಲ. ಮೊತ್ತಮೊದಲನೆಯದಾಗಿ, ಹುಚ್ಚಪ್ಪ ಮಾಸ್ತರರಿಗೆ ದೈವದತ್ತವಾಗಿ ಬಂದ ಗಾಢವಾದ ಕಂಠ ಅವರ ಹಾಡುಗಾರಿಕೆಗೆ ಅಸಾಧಾರಣವಾದ ಸೊಗಸನ್ನು ತಂದುಕೊಟ್ಟಿತ್ತು; ಸಂಗ್ಯಾಬಾಳ್ಯಾದ ಪ್ರಯೋಗವನ್ನು ಆಗ ನೋಡಿ ಆಸ್ವಾದಿಸಿದ ಬಹುಸಂಖ್ಯೆಯ ಪ್ರೇಕ್ಷಕರೂ ಈ ಪ್ರಯೋಗದ ಕುರಿತು ಬರೆದ ವಿಮರ್ಶಕರೂ ಈ ಸಂಗತಿಯನ್ನು ಎತ್ತಿ ಕೊಂಡಾಡಿದ್ದಾರೆ. ಆದರೆ, ಅವರೊಂದಿಗೆ ದನಿಗೂಡಿಸಿದ ನಮಗೆ ಗೊತ್ತಾಗಿರುವಂತೆ, ಹುಚ್ಚಪ್ಪ ಮಾಸ್ತರರ ಕಂಠವೊಂದೇ ಅವರ ಆಸ್ತಿಯಾಗಿರಲಿಲ್ಲ; ಆ ಗಹನ ಧ್ವನಿಯನ್ನು ಬಳಸಿ ಅವರು ಸಾಧಿಸುತ್ತಿದ್ದ ಭಾವಾಭಿವ್ಯಂಜನೆಯೇ ನಿಜವಾಗಿ ಅವರ ಪ್ರಮುಖ ಶಕ್ತಿಯಾಗಿತ್ತು. ಸಂಗ್ಯಾಬಾಳ್ಯಾದಂಥ ಸಾಂಪ್ರದಾಯಿಕ ರಂಗಪ್ರಕಾರವೊಂದರ ಹಾಡುಗಳನ್ನು ಕೇಳಿದ ಯಾರಿಗಾದರೂ ಒಂದು ಸರಳ ಸಂಗತಿ ಗೊತ್ತಾಗುತ್ತದೆ – ಈ ರಂಗಸಂಗೀತದಲ್ಲಿ ರಾಗವಿನ್ಯಾಸದ ಅಸಂಖ್ಯ ವೈವಿಧ್ಯಗಳೇನೂ ಇರುವುದಿಲ್ಲ; ಬದಲು, ನಾಲ್ಕಾರು ಮೂಲ ಮಟ್ಟುಗಳೇ ತುಸು ವ್ಯತ್ಯಾಸಗಳೊಂದಿಗೆ ತಿರುಗಾಮುರುಗಾ ಬೇರೆಬೇರೆ ಹಾಡುಗಳಲ್ಲಿ ಬಳಕೆಯಾಗುತ್ತಿರುತ್ತವೆ. ಹಾಗಾಗಿ ಶಕ್ತರಲ್ಲದ ಹಾಡುಗಾರರ ಬಾಯಲ್ಲಿ ಇಂಥ ನೂರಾರು ಹಾಡುಗಳಿರುವ ಪ್ರಯೋಗವು ಕೆಲವೇ ನಿಮಿಷಗಳ ಬಳಿಕ ಏಕತಾನವಾಗಿ ಕೇಳಲಾರಂಭಿಸುತ್ತದೆ. ಆದರೆ, ಹುಚ್ಚಪ್ಪ ಮಾಸ್ತರರು ಇಂಥ ಹಾಡುಗಳ

ಶ್ರುತಿಯನ್ನು ಆಗಾಗ ಬದಲಾಯಿಸುವ ಮೂಲಕ, ಹಾಡಿನ ವೇಗವನ್ನು ಹೆಚ್ಚುಕಮ್ಮಿ ಮಾಡುವ ಮೂಲಕ ಅಥವಾ ಬೇರೆಬೇರೆ ಸಂದರ್ಭದ ಹಾಡುಗಳಿಗೆ ಬೇರೆಬೇರೆ ಧ್ವನಿಶಯ್ಯೆಯನ್ನೇ ಪ್ರಯೋಗಿಸುವ ಮೂಲಕ, ತುಂಬ ವೈವಿಧ್ಯಮಯವಾದ ಭಾವಾಭಿವ್ಯಂಜನೆಯನ್ನೂ ಮಾಡುತ್ತಿದ್ದರು. ನನ್ನ ಪ್ರಕಾರ, ಹುಚ್ಚಪ್ಪ ಮಾಸ್ತರರ ನಿಜವಾದ ಸಾಮರ್ಥ್ಯ ಇದ್ದದ್ದು ಇಂಥ ಭಾವಾಭಿವ್ಯಂಜಕತೆಯಲ್ಲೇ ಹೊರತು ಅವರಿಗೆ ದತ್ತವಾಗಿ ಬಂದ 'ಕಂಚಿನ ಕಂಠ'ದಲ್ಲೇನೂ ಅಲ್ಲ.

ಇಂಥ ಭಾವಾಭಿವ್ಯಕ್ತಿಯನ್ನು ಸಾಧಿಸುವುದಕ್ಕಾಗಿ ಹುಚ್ಚಪ್ಪ ಮಾಸ್ತರರು ಈ ಪ್ರದರ್ಶನಗಳಾದ್ಯಂತ ತುಂಬ ಗಾಢವಾದ ಗಮನ ಕೇಂದ್ರೀಕರಣವನ್ನೂ ರೂಢಿಸಿಕೊಂಡಿದ್ದರು – ಎಂಬ ಸಂಗತಿಯು ಅವರೊಂದಿಗೆ ಕೆಲಸ ಮಾಡಿದ ಎಲ್ಲರಿಗೂ ಅನುಭವವಾಗಿರುತ್ತದೆ. ಕಣ್ಣುಗಳನ್ನು ಮುಚ್ಚಿಕೊಂಡು, ತಮ್ಮ ಧ್ವನಿಯನ್ನು ತಾವೇ ಅನುರಣಿಸಿಕೊಳ್ಳುತ್ತ, ಕ್ರಮೇಣ ಹೊರಪ್ರಪಂಚದ ವ್ಯವಹಾರಗಳಿಂದಲೇ ತಮ್ಮನ್ನು ಒಳಗೆಳೆದುಕೊಂಡು ಹಾಡುತ್ತಿದ್ದ ಅವರ ಶೈಲಿಯನ್ನು ನೋಡಿದರೆ ಒಮ್ಮೊಮ್ಮೆ ಈ ನಮ್ಮ ಮಾಸ್ತರರು ಈಗ ಸಂಗ್ಯಾಬಾಳ್ಯಾದ ಲೇಖಕ ಪತ್ತಾರ ಮಾಸ್ತರರ ಬಳಿಗೆ ಹೋಗಿಬಿಟ್ಟಿದ್ದಾರೋ ಎಂಬ ವಿಸ್ಮಯವನ್ನು ಹುಟ್ಟಿಸುತ್ತಿತ್ತು. ಅಂಥ ಭಾವದ ಆವಾಹನೆ ನಮ್ಮ ಪ್ರಯೋಗದ ಯಶಸ್ಸಿಗೆ ಹೇಗೆ ಕಾರಣವಾಯಿತೋ ಹಾಗೆಯೇ ಒಮ್ಮೊಮ್ಮೆ ತೊಡಕಾಗಿದ್ದೂ ಇದೆ; ಹಿಮ್ಮೇಳದ ಹಾಡುಗಾರರ ಹಾಸ್ಯಕ್ಕೆ ವಸ್ತುವಾಗಿದ್ದೂ ಇದೆ. ಕಾರಣ, ತಮ್ಮ ಹಾಡುಗಳನ್ನಾಧರಿಸಿ ರಂಗದ ಮೇಲೆ ಏನಾಗುತ್ತಿದೆ ಎಂಬುದನ್ನು ಹಲವೊಮ್ಮೆ ಮಾಸ್ತರರು ಗಮನಿಸುತ್ತಲೇ ಇರಲಿಲ್ಲ. ಮಾತ್ರವಲ್ಲ, ಕೆಲವೊಮ್ಮೆ ತಮ್ಮ ಪಕ್ಕದ ಹಾಡುಗಾರ ಹೊರಹೋಗಿ ಕಾಫಿ ಕುಡಿದು ಬಂದರೂ ಅವರಿಗೆ ಗೊತ್ತಾಗುತ್ತಿರಲಿಲ್ಲ! ಆದರೆ, ಇಂಥ ಕೇಂದ್ರೀಕರಣವಿಲ್ಲದೆ, ಹುಚ್ಚಪ್ಪ ಮಾಸ್ತರರು ಅಂಥ ಭಾವಾಭಿವ್ಯಂಜಕತೆಯನ್ನು ಸಾಧಿಸಿಕೊಳ್ಳುವುದು ಸಾಧ್ಯವೇ ಇರಲಿಲ್ಲ. ಕಾರಣ, ಹುಚ್ಚಪ್ಪ ಮಾಸ್ತರರಿಗೆ ಯಾವುದೇ ಸಂಗೀತಪ್ರಕಾರದ ಶಾಸ್ತ್ರಬದ್ಧ ತರಬೇತಿ ಇರಲಿಲ್ಲ; ಅಲ್ಲದೆ, ಅವರ ಗಾಯನ ಎಷ್ಟು 'ವ್ಯಕ್ತಿಕೇಂದ್ರಿತ' ವಾಗಿತ್ತೆಂದರೆ, ಹಾರ್ಮೋನಿಯಮ್ ಅಥವಾ ತಬಲಾಗಳಿಗೆ ಕೂಡಿಸಿ ಹಾಡುವುದೂ ಕೂಡ ಅವರಿಗೆ ಕಷ್ಟವೇ ಆಗಿತ್ತು; ಮತ್ತು, ಒಮ್ಮೆ ಕಷ್ಟಪಟ್ಟು ಹಾಗೆ ವಾದನದೊಂದಿಗೆ ಮೇಳೈಸಿ ಹಾಡಿದರೂ ಕೂಡ, ಅಂಥ ಹಾಡುಗಾರಿಕೆಯಲ್ಲಿ ಅವರ ಹಾಡಿನ ಸ್ವಾರಸ್ಯವೇ ಕಾಣೆಯಾಗುತ್ತಿತ್ತು – ಎಂದೂ ನನಗನ್ನಿಸಿದೆ. ಯಾಕೆಂದರೆ, ನನ್ನ ಅಭಿಪ್ರಾಯದಂತೆ, ಅವರ ಗಾಯನವೇನಿದ್ದರೂ ಅವರದೇ ಮನಸ್ಸು, ಧ್ವನಿ ಮತ್ತು ಕೈಯ ತಾಳ – ಇವುಗಳ ನಡುವಿನ ಒಂದು ಆಪ್ತವಲಯದ ವ್ಯವಹಾರವಾಗಿತ್ತು. ಪ್ರತಿಯೊಂದು ಹಾಡಿಗೂ ಆಧಾರವಾಗುವ



ಭಾವಕೋಶಗಳನ್ನು ಅವರು ತಮ್ಮ ವ್ಯಕ್ತಿಕೋಶದ ಒಳಗಿನಿಂದ ಆವಾಹಿಸಿಕೊಂಡು ಹಾಡುತ್ತಿದ್ದರು. ಹಾಗಾಗಿ, ಅವರ ಭಾವಾಭಿವ್ಯಂಜನವು ಇವತ್ತಿನ ಕಾಲದ ಬಹುತೇಕ 'ಸುಗಮ' ಸಂಗೀತದ ಹಾಗೆ, ಮೇಲುಸಿರಿನಲ್ಲಿ ಕಟ್ಟಿದ ಗಮಕದ ಪಲುಕುಗಳ ಮೇಲೆ ನಿಂತದ್ದಾಗಿರಲಿಲ್ಲ; ಅಥವಾ ಗದ್ಗದ ಕಂಠದ ಸುಳ್ಳು ಭಾವಾಭಿನಯದ ಸೋಂಕೂ ಅದಕ್ಕಿರಲಿಲ್ಲ. ನಾಭಿಯಿಂದ ಹೊರಟು ಎದೆಯಲ್ಲಿ ವಿಸ್ತಾರಗೊಳ್ಳುವ ಆ ಹಾಡುಗಾರಿಕೆಯಲ್ಲಿ ಆಂತರ್ಯದ ಭಾವಗಳು ಅವರನ್ನೂ ಮೀರಿ ಅಭಿವ್ಯಕ್ತಿಯ ಆಕರವಾಗಿ ಕೂಡಿ ಬರುತ್ತಿದ್ದವು; ಮತ್ತು ಈ ಧ್ವನಿನಿರ್ಮಾಣದ ಕೇಂದ್ರೀಕರಣವೇ ಅವರ ಭಾವದ ಆವಾಹನೆಯ ಶಕ್ತಿಕೇಂದ್ರವೂ ಆಗಿತ್ತು.

ಈ ಬಗೆಯ ಕೇಂದ್ರೀಕರಣ ಮತ್ತು ಭಾವಾಭಿವ್ಯಂಜನದ ರೂಢಿಗಳು ಹುಚ್ಚಪ್ಪ ಮಾಸ್ತರರ ಬದುಕಿನಿಂದಲೇ ಒದಗಿಬಂದದ್ದಾಗಿರಬೇಕು – ಎಂದು ನನ್ನ ಭಾವನೆ. ನನಗೆ ತಿಳಿದಿರುವ ಅವರ ಬದುಕಿನ ಒಂದೆರಡು ಸಂಗತಿಗಳನ್ನು ಸಾಕ್ಷ್ಯವಾಗಿ ಉಲ್ಲೇಖಿಸ ಬಹುದು. ನಾನು ನೋಡಿದಷ್ಟು ಕಾಲವೂ ಅವರು ಸಂಪೂರ್ಣವಾಗಿ ಹಿರೇಮನೆಯ ಗಿರಿಜನ ಆಶ್ರಮಶಾಲೆಯನ್ನು ತಮ್ಮ ಕಾರ್ಯಕ್ಷೇತ್ರವಾಗಿಸಿಕೊಂಡಿದ್ದರು. ಅಲ್ಲಿಗೆ ಒಂದೆರಡು ಬಾರಿ ಭೇಟಿ ಕೊಟ್ಟ ನನ್ನಂಥವರಿಗೂ ಅವರು ಅಲ್ಲಿನ ವಿದ್ಯಾರ್ಥಿಗಳ ಮೇಲೆ ಇಡುತ್ತಿದ್ದ ಗಮನ ಕೇಂದ್ರೀಕರಣವು ಅರಿವಿಗೆ ಬರುವಂತಿತ್ತು. ಆ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ವಿಚಾರಗಳಲ್ಲದೆ ನಾನಾ ಬಗೆಯ ಹಾಡುಕುಣಿತಗಳನ್ನು ಅವರು ಕಲಿಸುತ್ತಿದ್ದರು; ಮಾತ್ರವಲ್ಲ, ಆ ಗಿರಿಜನ ವಿದ್ಯಾರ್ಥಿಗಳ ಕುಟುಂಬಗಳೊಂದಿಗೂ ಅವರು ಸಂಪರ್ಕವಿಟ್ಟುಕೊಂಡು ಹಾಡು-ಕುಣಿತಗಳ ಕೊಡುಕೊಳೆ ನಡೆಸುತ್ತಿದ್ದರು, ಅವರ ಆಚರಣೆಗಳಲ್ಲಿ ಪಾಲ್ಗೊಂಡು ಅದರ ಅಧ್ಯಯನ ಮಾಡುತ್ತಿದ್ದರು. ಮತ್ತು, ಇಂಥ ಅಧ್ಯಯನವನ್ನು ಅವರು ಹೊರಗಿನ ತಜ್ಞರಾಗಿ ಮಾಡದೆ ಸ್ವಂತ ಆಸಕ್ತಿಗಾಗಿ ಮತ್ತು ಆ ಸಮುದಾಯದ ಹಿತೈಷಿಗಳಾಗಿ ಮಾಡುತ್ತಿದ್ದರೆಂಬುದೂ ಗಮನಾರ್ಹ ಸಂಗತಿ. ಸಾಹಿತ್ಯ-ಕಲೆಗಳಲ್ಲಿ ಅವರಿಗೆ ಎಷ್ಟು ಆಸಕ್ತಿಯಿತ್ತೆಂದರೆ, ಅವರು ಸತತವಾಗಿ ನಮ್ಮ ಅಕ್ಷರ ಪ್ರಕಾಶನದ ಎಲ್ಲ ಮುಖ್ಯ ಪುಸ್ತಕಗಳನ್ನೂ ತರಿಸಿಕೊಳ್ಳುತ್ತಿದ್ದರು; ಮತ್ತು ತಮ್ಮ ಸೀಮಿತ ವೇತನದಿಂದ ನಿಯತವಾಗಿ ಕಂತಿನ ಮೂಲಕ ಪಾವತಿ ಮಾಡುತ್ತಿದ್ದರು. ಆದ್ದರಿಂದ, ಅವರ ಸಂಗ್ಯಾಬಾಳ್ಯಾ ಹಾಡುಗಾರಿಕೆಯ ಭಾವಾಭಿವ್ಯಂಜನದ ಕಲೆಯು ಅವರ ಈ ಎಲ್ಲ ಸಾಮಾಜಿಕ ಮತ್ತು ವೈಯಕ್ತಿಕ ವ್ಯಕ್ತಿತ್ವಗಳ ಫಲಶ್ರುತಿಯೇ ಆಗಿತ್ತೆಂದು ನಾನು ತಿಳಿಯುತ್ತೇನೆ.

ಹುಚ್ಚಪ್ಪ ಮಾಸ್ತರರ ಹಾಡುಗಾರಿಕೆ ಮತ್ತು ನೀನಾಸಮ್ ತಂಡದ ಸಂಗ್ಯಾಬಾಳ್ಯಾ – ಇವೆರಡೂ ಈಗ ಹಲವು ದಶಕಗಳ ಹಿಂದಿನ ಕಥೆಗಳಾಗಿವೆ. ಆದರೆ, ಸಂಗ್ಯಾಬಾಳ್ಯಾದ

ಮೂಲಕ ರಂಗಭೂಮಿಯ ಸಂಬಂಧವನ್ನು ಕುದುರಿಸಿಕೊಂಡ ನಾನು ನನ್ನ ನಾನಾ ಬಗೆಯ ಕೆಲಸಗಳ ನಡುವೆ ಆಗಾಗ ಸಂಗ್ಯಾಬಾಳ್ಯಾವನ್ನು ನೆನಪಿಸಿಕೊಳ್ಳುತ್ತಿರುತ್ತೇನೆ. ಹಾಗೆಯೇ, ನಮ್ಮ ರಂಗಶಿಕ್ಷಣಕೇಂದ್ರದಲ್ಲಿ ನಟರೊಂದಿಗೆ ಕೆಲಸ ಮಾಡುವ ಹಲವು ಸನ್ನಿವೇಶಗಳಲ್ಲಿ ಹೇಗೆ ಅಭಿನಯವೆಂಬುದು ಕೇವಲ ಕೆಲವು ಕಸುಬುಗಾರಿಕೆಗಳ ಸಮೂಹವಲ್ಲ ಎಂಬುದರ ಕುರಿತೂ, ಬದಲು, ಹೇಗೆ ಅದು ಬದುಕಿನ ಶ್ರದ್ಧೆಯ ಒಂದು ಮುಖ ಮತ್ತು ವೈಯಕ್ತಿಕ ಹುಡುಕಾಟದ ಒಂದು ಸಾಧನ ಎಂಬ ಬಗ್ಗೆಯೂ ಆಗಾಗ ಚರ್ಚೆ ನಡೆಸುತ್ತಿರುತ್ತೇನೆ. ಅಂಥ ಚರ್ಚೆಗಳಲ್ಲಿ ಹಲವೊಮ್ಮೆ ನನಗೆ ಹುಚ್ಚಪ್ಪ ಮಾಸ್ತರರ ಆವಾಹಿತ ಭಾವಾಭಿವ್ಯಂಜನದ ನೆನಪು ಒಂದು ಮಾದರಿಯಾಗಿ ಒದಗಿಬರುತ್ತದೆ.

**ನೀನಾಸಮ್‌ನ ಅಂತರ್ಜಾಲ ತಾಣ:**

www.ninasam.org

ಕಳೆದ ೨೦೧೧ ಅಕ್ಟೋಬರ್ ತಿಂಗಳಲ್ಲಿ ಉದ್ಘಾಟಿತವಾದ ನೀನಾಸಮ್‌ನ ಅಂತರ್ಜಾಲ ತಾಣವು ಈಗ ಸಂಸ್ಥೆಯನ್ನು ಕುರಿತ ಹಲವು ಬಗೆಯ ಮಾಹಿತಿಗಳನ್ನು ಒಳಗೊಂಡು ಬೆಳೆಯುತ್ತಿದೆ. ಸಂಸ್ಥೆಯ ಇತಿಹಾಸ, ಸ್ವರೂಪ, ಧ್ಯೇಯೋದ್ದೇಶಗಳು, ಆಡಳಿತಾತ್ಮಕ ವಿವರಗಳಿಂದ ಮೊದಲುಗೊಂಡು ರಂಗಶಿಕ್ಷಣ ಕೇಂದ್ರ, ತಿರುಗಾಟ, ಸಂಸ್ಕೃತಿ ಶಿಬಿರ ಮೊದಲಾದ ನೀನಾಸಮ್‌ನ ವಿವಿಧ ಅಂಗಸಂಸ್ಥೆಗಳ ವಿವರಗಳು ಇಲ್ಲಿ ಲಭ್ಯವಿವೆ. ಹಾಗೆಯೇ, ನೀನಾಸಮ್‌ನ ವಾರ್ಷಿಕ ವರದಿಗಳಿಂದ ಆರಂಭಿಸಿ ಚಟುವಟಿಕೆಗಳನ್ನು ಪರಿಚಯಿಸುವ ಹಲವಾರು ಬರಹಗಳು, ಛಾಯಾಚಿತ್ರ ಮತ್ತು ವಿಡಿಯೋ ತುಣುಕುಗಳವರೆಗೆ ಹತ್ತಾರು ಬಗೆಯ ಮಾಹಿತಿಗಳನ್ನೂ ಇಲ್ಲಿ ಸೇರಿಸಲಾಗಿದೆ; ನೀನಾಸಮ್‌ನಲ್ಲಿ ನಿರ್ಮಿತವಾಗಿರುವ ರಂಗಮಂದಿರಗಳ ಚಿತ್ರ, ನಕ್ಷೆ ಮತ್ತು ಲಭ್ಯ ಸೌಲಭ್ಯಗಳ ವಿವರಗಳೂ ಕೂಡ ಇಲ್ಲಿ ಸಿಗುತ್ತವೆ. ಅಲ್ಲದೆ, ನೀನಾಸಮ್ ಕಾಲಕಾಲಕ್ಕೆ ನಡೆಸುವ ಕಾರ್ಯಕ್ರಮಗಳ, ಶಿಬಿರಗಳ ಮತ್ತು ನಾಟಕ ಪ್ರದರ್ಶನಗಳ ಪ್ರಕಟಣೆ ಈ ತಾಣದಲ್ಲಿ ನಡೆಯುತ್ತಿದೆ; ನೀನಾಸಮ್‌ನ ಬೇಸಿಗೆ ರಂಗಶಿಬಿರ ಮತ್ತು ಸಂಸ್ಕೃತಿ ಶಿಬಿರ ಮೊದಲಾದ ಕಾರ್ಯಕ್ರಮಗಳಿಗೆ ಅಂತರ್ಜಾಲದ ಮೂಲಕವೇ ಪ್ರವೇಶ ಪತ್ರ ಸಲ್ಲಿಸುವ ಅವಕಾಶವನ್ನೂ ಕೂಡ ಇಲ್ಲಿ ಕಲ್ಪಿಸಲಾಗುತ್ತಿದೆ. ಜತೆಗೆ, ನೀನಾಸಮ್ ಮಾತುಕತೆಯ ಈಚಿನ ಸಂಚಿಕೆಗಳು ಮತ್ತು ಅಕ್ಷರ ಪ್ರಕಾಶನದ ಪುಸ್ತಕ ಪಟ್ಟಿ ಮೊದಲಾದವು ಕೂಡ ಇಲ್ಲಿ ಲಭ್ಯವಿವೆ.

# ರಘುನಂದನ ಅವರ ನಾಟಕ
# ‘ಎತ್ತ ಹಾರಿದೆ ಹಂಸ’

**ಟಿ.ಪಿ. ಅಶೋಕ**

ರಘುನಂದನ ಅವರು, ಇಂದು ಭಾರತದಲ್ಲಿ ಕೆಲಸ ಮಾಡುತ್ತಿರುವ ಅತ್ಯಂತ ಕ್ರಿಯಾಶೀಲರೂ ಮಹತ್ವಾಕಾಂಕ್ಷಿಗಳೂ ಆದೊಬ್ಬ ರಂಗಕರ್ಮಿ. ಅವರು ಹಲವಾರು ನಾಟಕಗಳ ಯಶಸ್ವಿ ರಂಗಪ್ರಯೋಗಗಳನ್ನು ನಿರ್ಮಿಸಿದ್ದು, ಅದರಲ್ಲಿ ಸಂಸ್ಕೃತ ನಾಟಕಗಳೂ ಪಾಶ್ಚಿಮಾತ್ಯ ಮಹತ್ಕೃತಿಗಳೂ ಮತ್ತು ಕನ್ನಡ ನಾಟಕಗಳೂ ಸೇರಿವೆ. ಈ ಎಲ್ಲ ಪ್ರಯೋಗಗಳಲ್ಲಿಯೂ ಅವರು ನಾಟಕ ಸಾಹಿತ್ಯದ ಪಠ್ಯದ ಆಚೆಗಿರುವ ಅನೇಕ ಸಂಗತಿಗಳು ನಮಗೆ ಕಾಣುವಂತೆ ಮಾಡಿದವರು. ರಂಗಭೂಮಿಯ ಸಾಧ್ಯತೆಗಳನ್ನೂ ಅವರು ಹಲವು ರೀತಿಗಳಿಂದ ವಿಸ್ತರಿಸಿದ್ದಾರೆ – ಕಾವ್ಯ ಮತ್ತು ಕಥನಗಳನ್ನಾಧರಿಸಿಯೂ ಅವರು ರಂಗಪಠ್ಯಗಳನ್ನು ರೂಪಿಸಿದ್ದಾರೆ. ಅವರೊಬ್ಬ ಅತ್ಯುತ್ತಮ ರಂಗವಿಮರ್ಶಕ ಮತ್ತು ರಂಗಶಿಕ್ಷಕರೂ ಆಗಿದ್ದು ನಾಟಕ ಮತ್ತು ಸಾಹಿತ್ಯ ಕೃತಿಗಳನ್ನು ಸಿದ್ಧ ಜಾಡಿನಿಂದ ಭಿನ್ನವಾಗಿ ವ್ಯಾಖ್ಯಾನಿಸುವುದರಲ್ಲಿ ಸಿದ್ಧಹಸ್ತರು. ರಾಜಕಾರಣ ಮತ್ತು ಕಾವ್ಯಮೀಮಾಂಸೆ – ಈ ಎರಡಕ್ಕೂ ಸಮಾನವಾಗಿ ಅವಧಾರಣೆ ಕೊಡುವ ರಘುನಂದನ ಅವರು ರಂಗಮಾಧ್ಯಮದ ಸೂಕ್ಷ್ಮಗಳನ್ನು ಸರಳೀಕರಿಸದೆ ಪ್ರೇಕ್ಷಕರನ್ನು ಗಂಭೀರ ಚಿಂತನೆಗೆ ತೊಡಗಿಸಿದ್ದಾರೆ; ಬದುಕು ಮತ್ತು ಕಲೆಗಳ ನಡುವೆ ಹೊಸ ಬಗೆಯ ಮುಖಾಮುಖಿ ಮಾಡಿಸುವತ್ತ ರಂಗಪ್ರೇಕ್ಷಕರನ್ನು ಕರೆದೊಯ್ದಿದ್ದಾರೆ.

ರಂಗಭೂಮಿಯೊಂದಿಗೆ ಮಾತ್ರವಲ್ಲ, ಸಂಗೀತ-ಸಾಹಿತ್ಯಾದಿ ಕಲೆಗಳೊಂದಿಗೆ ಹಾಗೂ ರಾಜಕಾರಣದೊಂದಿಗೆ ಕಳೆದ ಮೂರು ದಶಕಗಳಿಗಿಂತ ಹೆಚ್ಚು ಕಾಲ ಒಡನಾಡುತ್ತ ಬಂದಿರುವವರು ರಘುನಂದನ. ಅವರಿಗಿರುವ ಇಂಥ ಗಾಢವಾದ ಮತ್ತು ಸತತವಾದ ಬದ್ಧತೆಯ ತುಂಬ ಅರ್ಥಪೂರ್ಣವಾದ ಒಂದು ಉತ್ಪನ್ನವೇ ಅವರ ನಾಟಕ – ‘ಎತ್ತ ಹಾರಿದೆ ಹಂಸ’ (ಅಕ್ಷರ ಪ್ರಕಾಶನ, ಹೆಗ್ಗೋಡು: ೨೦೧೧). ಅವರು ಸಂಕೋಚದ ಸ್ವಭಾವದವರು, ಪ್ರತಿಯೊಂದು ಕೆಲಸವನ್ನೂ ತುಂಬ ಸೂಕ್ಷ್ಮವಾದ

ಕುಸುರಿಯಲ್ಲಿ ರೂಪಿಸುವವರು ಮತ್ತು ಸದಾ ತಮ್ಮ ಬಗ್ಗೆಯೇ ಅತೃಪ್ತರೂ ಆಗಿರುವುದರಿಂದಲೇ ದಶಕಗಳ ಹಿಂದೆಯೇ ಬರೆದು ಆಡಿಸಿದ ಈ ನಾಟಕ ಕೃತಿಯನ್ನು ಈವರೆಗೂ ಪ್ರಕಟಿಸುವುದರಲ್ಲಿ ಆತುರ ತೋರಿಸಲಿಲ್ಲ. ಈಗ ಪ್ರಕಟವಾಗಿರುವ ಅವರ ನಾಟಕ 'ಎತ್ತ ಹಾರಿದೆ ಹಂಸ' ನನಗನ್ನಿಸುವಂತೆ, ಕಳೆದ ಒಂದು ದಶಕದೀಚೆಗೆ ಕನ್ನಡದಲ್ಲಿ ಪ್ರಕಟವಾದ ನಾಟಕಗಳಲ್ಲಿಯೇ ಮುಂಚೂಣಿಯಲ್ಲಿ ನಿಲ್ಲುವಂಥದು.

೧೯೩೦ರ ದಶಕದ ಭಾರತದ ಇತಿಹಾಸದ ಮೂರು ವಿರಾಟ್ ಕಥನಗಳನ್ನು ಪರಿಶೀಲಿಸುವ ಒಂದು ಪ್ರಯತ್ನವನ್ನು ಈ ನಾಟಕ ಕೈಗೆತ್ತಿಕೊಂಡಿದೆ. ಹಾಗಂತ ನಾಟಕಕಾರರಿಗೆ ಈ ಕಾಲದ ಇತಿಹಾಸದ ಒಂದು ಅಧಿಕೃತ ಚಿತ್ರಣ ನೀಡುವುದರಲ್ಲೇನೂ ಆಸಕ್ತಿ ಇಲ್ಲ; ಪಂಡಿತರಿಗೂ ವಿದ್ವಾಂಸರಿಗೂ ಉಪಯುಕ್ತವಾಗಬಲ್ಲ ಇತಿಹಾಸವೊಂದನ್ನು ಪುನರ್‌ನಿರ್ಮಿಸುವುದು ಈ ನಾಟಕದ ಗುರಿಯಲ್ಲ. ಬದಲು, ರಘುನಂದನ ಅವರ ನಾಟಕದ ಕೇಂದ್ರ ಕಾಳಜಿಯು, ಇಂಥ ಇತಿಹಾಸದ ಪ್ರಮುಖ ಘಟನಾವಳಿಗಳು ಹೇಗೆ ಸಾಧಾರಣ ಬದುಕನ್ನೂ ಪ್ರಭಾವಿಸಿವೆ ಎಂಬುದನ್ನು ಗ್ರಹಿಸುವುದು. ಮತ್ತು, ಇಂಥ ಘಟನೆಗಳನ್ನು ತಮ್ಮದೇ ಮಿತಾಕಾಂಕ್ಷೆ ಮತ್ತು ಘನತೆಗಳೊಂದಿಗೆ ಬದುಕುವ ಸಾದಾ ಜನರು ಹೇಗೆ ಸ್ವೀಕರಿಸಿದ್ದಾರೆ ಎಂಬುದನ್ನು ಗುರುತಿಸುವುದು ಈ ನಾಟಕದ ಕಾಳಜಿ. ಇತಿಹಾಸ ಎಂದರೆ ಅಂಥ ಜನರಿಗೆ ಯಾವುದು ? ಮೇಲ್ನೋಟಕ್ಕೆ ರಾಜಕೀಯ-ವಿಮುಖರೆಂದು ಕಾಣುವ ಈ ಬಗೆಯ ಜನಗಳ ನಿಜರಾಜಕಾರಣ ಯಾವ ಬಗೆಯದು ? ಇಂಥ ಇತಿಹಾಸದ ನಿರ್ದಿಷ್ಟ ಸಂದರ್ಭದಲ್ಲಿ ಸಿಲುಕಿರುವ ವ್ಯಕ್ತಿಯೊಬ್ಬ ಹೇಗೆ ತನ್ನ ವೈಯಕ್ತಿಕ-ಕೌಟುಂಬಿಕ ಒತ್ತಡಗಳನ್ನೂ ರಾಷ್ಟ್ರನಿರ್ಮಾಣದ ಕೆಲಸವನ್ನೂ ಒಟ್ಟೊಟ್ಟಿಗೇ ನಿಭಾಯಿಸುತ್ತಾನೆ ? – ಈ ಮೊದಲಾದ ಹಲವು ಪ್ರಶ್ನೆಗಳು ಈ ನಾಟಕದುದ್ದಕ್ಕೂ ಪ್ರತಿಧ್ವನಿಸುತ್ತಲೇ ಇರುತ್ತವೆ.

ಇಂಥ ಐತಿಹಾಸಿಕ ಸಾಂದರ್ಭಿಕ ವಿಚಾರಗಳನ್ನು ಪರಿಶೀಲನೆ ಮಾಡುತ್ತಿದ್ದರೂ ಕೂಡ ಪ್ರಸ್ತುತ ನಾಟಕವು ವಾಸ್ತವವಾದಿ ಪಾತಳಿಯಲ್ಲಿ ಸಾಗುವುದಿಲ್ಲ ಎಂಬುದು ಗಮನಾರ್ಹ; ನಾಟಕಕಾರರು ಈ ಮಾರ್ಗವನ್ನು ಪ್ರಜ್ಞಾಪೂರ್ವಕ ಬಿಟ್ಟಿದ್ದಾರೆ. ಬದಲು, ತುಂಬ ಸೂಕ್ಷ್ಮವಾಗಿ ಮತ್ತು ಕೌಶಲಪೂರ್ಣವಾಗಿ ಅವರು, ಹಲವು ಬಗೆಯ ದೇಶಿ ಕಥನ-ಕಾವ್ಯ-ನಾಟಕ ಮಾದರಿಗಳ ಜತೆಗೆ ತಮ್ಮ ನಾಟಕೀಯ ನಿರೂಪಣೆಯನ್ನು ಕಸಿ ಮಾಡಿದ್ದಾರೆ. ಈ ನಾಟಕದ ನಿರೂಪಣೆಯಲ್ಲಿ ನಾಟಕಕಾರರು ತುಂಬ ಎಚ್ಚರದಿಂದ ಆಯ್ದ ಜಾನಪದ ಗೀತೆಗಳನ್ನು ಬಳಸುತ್ತಾರೆ; ಸಾಂಪ್ರದಾಯಿಕ ಮತ್ತು ಆಧುನಿಕ ಕಾವ್ಯಭಾಗಗಳನ್ನು ಬಳಸುತ್ತಾರೆ; ಮತ್ತು ಇವೆಲ್ಲ ಕೂಡಿದ ವಾಗ್ವಿಲಾಸವೊಂದನ್ನು ಈ ನಾಟಕವು ಕಟ್ಟಿಕೊಂಡಿದೆ. ಹೀಗೆ ರಘುನಂದನ ಅವರು ಕನ್ನಡ ಭಾಷೆಯೊಂದಿಗೆ



ಮಾಡಿರುವ ಪ್ರಯೋಗವು ಮಹತ್ವದ್ದು. ಈ ಬಗೆಯಲ್ಲಿ ಭಾಷೆಯ ನುಡಿಗಟ್ಟು ಮತ್ತು ಸ್ವರೂಪಗಳ ಬಗ್ಗೆ ಇವರಷ್ಟು ಪ್ರಯೋಗಗಳನ್ನು ಮಾಡಿರುವವರು ಸಮಕಾಲೀನ ಕನ್ನಡ ನಾಟಕವಲಯದಲ್ಲಿ ತುಂಬ ವಿರಳ. ಇಂಥ ಭಾಷಾಭಿತ್ತಿಯಿರುವ ಕಾರಣದಿಂದಲೇ, ಈ ನಾಟಕವು ನಿರ್ದಿಷ್ಟ ದೇಶಕಾಲದ ಐತಿಹಾಸಿಕ ಘಟನೆ-ವ್ಯಕ್ತಿ-ಸ್ಥಳಗಳನ್ನು ಬಿಂಬಿಸುತ್ತಲೇ, ಅದನ್ನೊಂದು ಶ್ರೀಮಂತ ಪುರಾಣವಾಗಿ ಹೆಣೆಯುವುದರಲ್ಲೂ ಸಫಲವಾಗಿದೆ. ತಮ್ಮ ಈ ನಾಟಕವನ್ನು ರಘುನಂದನ 'ಒಂದು ಮೆಲೋಡ್ರಾಮಾ' ಎಂದು ಕರೆದುಕೊಂಡಿದ್ದಾರೆ. ನನಗನ್ನಿಸುವಂತೆ, ಅವರು ಈ ಪದವನ್ನು ನಾಮಪದವಾಗಿ ಬಳಸಿದ್ದಾರೆ; ವಿಶೇಷಣವಾಗಿಯಲ್ಲ. ನಿಜ, ಮೆಲೋಡ್ರಾಮಾ ಎಂಬುದು ಈ ಕೃತಿಯಲ್ಲಿ ಕಾಣುವಂತೆ ಒಂದು ವಿಶಿಷ್ಟ ನಾಟಕ ಪ್ರಕಾರವೇ ಸರಿ.

೧೯೩೦ರ ದಶಕದ ಮೈಸೂರು ಸಂಸ್ಥಾನದಲ್ಲಿ ಸರ್ಕಾರಿ ಅಧಿಕಾರಿಯಾಗಿ ಕೆಲಸ ಮಾಡುತ್ತಿದ್ದ ರಾಮಚಂದ್ರ ರಾವ್ ಎಂಬಾತನ ಸುತ್ತ ಈ ನಾಟಕ ಹಬ್ಬಿಕೊಂಡಿದೆ. ಆರಂಭದಲ್ಲಿ ಆತನ ಒಲವು ಮೈಸೂರು ಮಹಾರಾಜ ಮತ್ತು ಮಹಾತ್ಮ ಗಾಂಧಿ – ಇವರಿಬ್ಬರ ಬಗ್ಗೆಯೂ ಹಂಚಿಕೊಂಡಿದೆ. ಆತ ಬ್ರಿಟಿಷರಿಗೆ ವಿರೋಧಿ, ಆದರೆ ಆಧುನಿಕತೆಗೆ ವಿರೋಧಿಯಲ್ಲ. ವಿಶ್ವೇಶ್ವರಯ್ಯನವರಿಂದ ಪ್ರಭಾವಿತನಾಗಿರುವ ಆತ ಅವರಂತೆಯೇ ಪೋಷಾಕು ಧರಿಸುವವ. ಆತ ಮುಸ್ಲಿಮ್ ವಿರೋಧಿಯಲ್ಲ, ಆದರೆ, ಈ ನಾಟಕದ ಹರಿವಿನಲ್ಲಿ ಆತ ಸ್ವಾಮಿ ವಿವೇಕಾನಂದರ ವಿಚಾರಧಾರೆಯನ್ನು ಮುಂದುವರೆಸುವವನೆಂದು ಸೂಚಿಸಲಾಗುವ ಪಿಪ್ಪಲಾನಂದನೆಂಬ ವ್ಯಕ್ತಿಯ ಹಿಂದುತ್ವದ ಮಾತುಗಳಿಂದ ಆಕರ್ಷಿತನಾಗುತ್ತಾನೆ. ಪಿಪ್ಪಲಾನಂದನ ಸವಾಲನ್ನು ಸ್ವೀಕರಿಸಿ ಈತ ಸರ್ಕಾರಿ ಕೆಲಸ ಬಿಡುತ್ತಾನೆ; ಖಾದಿ ಬಟ್ಟೆಗೆ ವರ್ಗಾವಣೆಗೊಳ್ಳುತ್ತಾನೆ; ಗಾಂಧಿಯವರ ಉಪ್ಪಿನ ಸತ್ಯಾಗ್ರಹಕ್ಕೆ ಹೋಗಿ ಸೇರಿಕೊಳ್ಳುತ್ತಾನೆ. ಮತ್ತು, ಈ ಎಲ್ಲ ಕೆಲಸಗಳಿಗಾಗಿ ಆತ ತನ್ನ ವೃದ್ಧ ತಾಯಿಯನ್ನೂ ಮತ್ತು ಬಸುರಿ ಹೆಂಡತಿಯನ್ನೂ ಊರಲ್ಲೇ ಬಿಟ್ಟು ಹೋಗುತ್ತಾನೆ. ಆಬಳಿಕ ಅವನಿಗೆ ಗಾಂಧಿಯವರಿಂದಲೂ ಭ್ರಮನಿರಸನವಾಗುತ್ತದೆ; ಮತ್ತು, ಆತ ಕಮ್ಯೂನಿಸಮ್‌ನಿಂದ ಆಕರ್ಷಿತನಾಗಿ ಎಂ.ಎನ್. ರಾಯ್ ಅವರ ಅನುಯಾಯಿಯಾಗಿ ಪರಿವರ್ತನೆಗೊಳ್ಳುತ್ತಾನೆ.

ಒಂದು ಕಡೆಗೆ, ಈ ಬಗೆಯ ಆವೇಶ-ಆವೇಗ-ಗೊಂದಲಗಳಿಂದ ತುಂಬಿದ ಮತ್ತು ಆದರ್ಶದ ಬೆನ್ನು ಹತ್ತುವ ನಾಯಕವ್ಯಕ್ತಿತ್ವವೊಂದನ್ನು ಕಟ್ಟುವ ನಾಟಕಕಾರರು, ಅದಕ್ಕೆ ಸಮಾನಾಂತರವಾಗಿ ನಿತ್ಯ-ತಿಳುವಳಿಕೆಯ ಹಳ್ಳಿಗರ ಸಮೂಹವೊಂದನ್ನು ಮುಖಾಮುಖಿಯಾಗಿಸಿ ಕಟ್ಟುತ್ತಾರೆ. ಆ ಹಳ್ಳಿಗರೆಲ್ಲರ ನಿಲುವುಗಳು ಈ ನಾಯಕನ ವ್ಯಕ್ತಿತ್ವಕ್ಕೆ ಎದುರಾಗಿ ನಿಂತು ಆತನ ನಡೆನುಡಿಗಳನ್ನು ತಮ್ಮದೇ ರೀತಿಯಿಂದ ವ್ಯಾಖ್ಯಾನ

ಮಾಡುತ್ತವೆ. ಸ್ವಾರಸ್ಯವೆಂದರೆ, ಪಿಪ್ಪಲಾನಂದರಿಗೆ ಈ ಜನಸಮೂಹಕ್ಕೆ 'ಧರ್ಮೋಪದೇಶ'ವನ್ನು ಮಾಡಬೇಕೆಂಬ ಇರಾದೆಯಿದೆ; ಅವರ ಶಿಷ್ಯನಾಗಿದ್ದ ರಾಮಚಂದ್ರನಿಗೂ ಇನ್ನೊಂದು ಬಗೆಯ ಸಮಾಜ ಸುಧಾರಣೆಯ ಹಂಬಲವಿದೆ. ಆದರೆ ಇವರಿಬ್ಬರಿಗೂ ಆ ಹಳ್ಳಿಗರು ಸ್ವತಃ ನಡೆಸುತ್ತಿರುವ ನೈಜ ಹಿಂದೂ ಧರ್ಮಾವಲಂಬಿ ಬದುಕಿನ ಗುರುತು ಹತ್ತುವುದಿಲ್ಲ. ಹಾಗೆಯೇ, ಸ್ವ-ಘೋಷಿತ ಗಾಂಧಿವಾದಿಯಾಗಿ ಪರಿವರ್ತನೆಗೊಂಡಿದ್ದರೂ ಈ ರಾಮಚಂದ್ರನಿಗೆ ತನ್ನ ಸುತ್ತಲಿನ ಹಳ್ಳಿಗರು ತಮ್ಮ ನಿತ್ಯಬದುಕಿನಲ್ಲಿ ರೂಢಿಸಿಕೊಂಡಿರುವ ಗಾಂಧಿಮಾರ್ಗದ ದಾರಿ ಕಾಣುವುದಿಲ್ಲ. ಅಲ್ಲದೆ, ರಾಮಚಂದ್ರ ಕಮ್ಯೂನಿಸ್ಟ್ ಆಗಿ ಮಾರ್ಪಾಟಾದ ಬಳಿಕವೂ ಆತನಿಗೆ ಈ ಹಳ್ಳಿಯ ಶ್ರಮಿಕರ ಬದುಕಿನ ವಾಸ್ತವಗಳು ಗೋಚರಿಸುವುದೇ ಇಲ್ಲ. ಆತ ಬ್ರಾಹ್ಮಣನಾಗಿದ್ದೂ ಕೆಳಜಾತಿಯ ರೈತರ ಹುಡುಗಿಯನ್ನು ಮದುವೆಯಾಗಿದ್ದೇನೋ ನಿಜ; ಆದರೆ, ಆತನ ಆದರ್ಶದ ಭ್ರಮೆಗಳಾಚೆಗಿನ ವಾಸ್ತವವನ್ನು ಕಾಣಲು ಈ ಸಂಬಂಧವೂ ಆತನಿಗೆ ಸಹಾಯ ಮಾಡುವುದಿಲ್ಲ. ಈ ನಾಟಕದ ಅಂತ್ಯದಲ್ಲಿ ಆತನ ಹೆಂಡತಿ ಸ್ಥಳೀಯ ಸ್ಟೇಷನ್ ಮಾಸ್ತರನಿಂದ ಅತ್ಯಾಚಾರಕ್ಕೊಳಗಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಆದರೆ, ಈ ಆತ್ಮಹತ್ಯೆಗೆ ಆದರ್ಶವಾದಿ ರಾಮಚಂದ್ರನೂ ಕಾರಣ ಎಂಬ ಸ್ಪಷ್ಟವಾದ ಧ್ವನಿಯನ್ನು ನಾಟಕ ಸೃಷ್ಟಿಸುತ್ತದೆ.

ಹೀಗೆ, ಈ ನಾಟಕವು ಯಾವುದೇ ಸರಳ ಸೈದ್ಧಾಂತಿಕ ತೀರ್ಮಾನಗಳಿಗೆ ತಲುಪುವಂಥದಲ್ಲ — ವಿವೇಕಾನಂದರನ್ನೋ ಗಾಂಧಿಯನ್ನೋ, ಎಂ.ಎನ್. ರಾಯ್‌ರನ್ನೋ ನಿರಾಕರಿಸುವುದು ಈ ನಾಟಕದ ಗುರಿಯಲ್ಲ; ಇದು ಅಂಥ ಚಿಂತಕರನ್ನು ಹಿನ್ನೆಲೆಯಾಗಿಟ್ಟುಕೊಂಡು ಮುನ್ನುಗ್ಗುವ ಅಪ್ರಾಯೋಗಿಕ ಆದರ್ಶವಾದಿಗಳ ಟೀಕೆಯಾಗಿದೆ. ಇದೇ, ಮುಖ್ಯವಾಗಿ, ಇವತ್ತಿನ ಕಾಲಕ್ಕೆ ಈ ನಾಟಕವು ಪ್ರತಿಸ್ಪಂದಿಸುವ ವಿಧಾನ.

ಇತ್ತೀಚೆಗೆ ನಿಧನರಾದ
ಯಕ್ಷಗಾನ ರಂಗದ ಹಿರಿಯ ಭಾಗವತ
**ಶ್ರೀ ಕಡತೋಕ ಮಂಜುನಾಥ ಭಾಗವತ**
ಮತ್ತು ಹಿರಿಯ ಸಾಹಿತಿ ಹಾಗೂ ವಿದ್ವಾಂಸರಾದ
**ಡಾ.ಎಲ್. ಬಸವರಾಜು**
ಇವರಿಗೆ ನೀನಾಸಮ್‌ನ ಶ್ರದ್ಧಾಂಜಲಿ

# ನೂರು ಸಂಚಿಕೆಗಳಲ್ಲಿ ಮಾತುಕತೆ ಪರಿವಿಡಿ ಸಂಪುಟ

*ನೀನಾಸಮ್‌ನ ಖಾಸಗಿ ವಾರ್ತಾಪತ್ರವಾಗಿ ನೀನಾಸಮ್ ಮಾತುಕತೆ ಪ್ರಾರಂಭವಾದುದು ೧೯೮೭ರಲ್ಲಿ. ಇಂದಿಗೆ ಇಪ್ಪತ್ತೈದು ವರ್ಷಗಳು ತುಂಬಿದವು. ಅಂದರೆ ನೂರು ಸಂಚಿಕೆಗಳು ಬಂದವು. ಮೊದಲು, ನೀನಾಸಮ್‌ನ ಚಟುವಟಿಕೆಗಳನ್ನು ಪರಿಚಯಿಸುವ ಕೇವಲ ಎಂಟು ಪುಟಗಳ ಕಿರು ಹೊತ್ತಗೆಯಾಗಿ ಪ್ರಾರಂಭವಾದುದು ಬರುಬರುತ್ತಾ ಗಾತ್ರದಲ್ಲಿ ಇಮ್ಮಡಿ ಮುಮ್ಮಡಿಯಾಗಿ, ಹಲವು ತೆರನಾದ ಸಾಂದರ್ಭಿಕ ಸಂಗತಿಗಳನ್ನು ಚರ್ಚಿಸುವ ಕಿರುಪತ್ರಿಕೆಯಾಗಿ ರೂಪು ತಳೆಯಿತು. ಆಯಾ ಕಾಲಕ್ಕೆ ಪ್ರಸ್ತುತವಾದ ಸಾಮಾಜಿಕ ಸಂಗತಿಗಳ ಕುರಿತು ಸಂವಾದ ರೂಪದ ಹಲವು ಲೇಖನಗುಚ್ಛಗಳನ್ನೂ ಪ್ರಕಟಿಸಿತು. ಕಳೆದ ನೂರು ಸಂಚಿಕೆಗಳಲ್ಲಿ ಪ್ರಕಟವಾಗಿರುವ ಇಂತಹ ಲೇಖನಗಳ ಪರಿವಿಡಿಯೊಂದು ಒಂದೆಡೆ ಸಿಗುವಂತಾದರೆ ಒಳ್ಳೆಯದೆಂಬ ಹಲವು ಮಂದಿ ಹಿತೈಷಿಗಳ ಸೂಚನೆಯನ್ನು ಸರಿಯೆಂದು ತಿಳಿದು, ೧೦೧ನೆಯ ಈ ಸಂಚಿಕೆಯಲ್ಲಿ ಅಂತಹ ಪರಿವಿಡಿಯೊಂದನ್ನು ಪ್ರಕಟಿಸುತ್ತಿದ್ದೇವೆ.*

ಸಂ.೧. ವರ್ಷ ೧ - ಸಂಚಿಕೆ ೧; ಫೆಬ್ರುವರಿ ೧೯೮೭
೧. ಮುಖಾಮುಖಿ: ಇಳಕಲ್ಲಿನಲ್ಲಿ ತಿರುಗಾಟ — ಅಕ್ಷರ ಕೆ.ವಿ.
೨. ನೀನಾಸಮ್ ಚಟುವಟಿಕೆಗಳು, ರಂಗಶಿಕ್ಷಣ ಕೇಂದ್ರದ ವರದಿಗಳು.
ಸಂ.೨. ವರ್ಷ ೧ - ಸಂಚಿಕೆ ೨; ಮೇ ೧೯೮೭
೧. ಕರ್ನಾಟಕದ ರಂಗಮಂದಿರಗಳು: ಒಂದು ಸಮೀಕ್ಷೆ — ರಮಾನಂದ
೨. ಇಂಗ್ಲೆಂಡಿನ ಪ್ಯಾನ್ ಪ್ರಾಜೆಕ್ಟ್ ತಂಡದ ಭೇಟಿ.

ಸಂ.೩. ವರ್ಷ ೧ - ಸಂಚಿಕೆ ೩; ಆಗಸ್ಟ್ ೧೯೮೭

೧. ಮಕ್ಕಳ ಮಾತಿನಲ್ಲಿ 'ಆಲಿಬಾಬಾ'

೨. ಮುಖಾಮುಖಿ ೨: ಇಟಗಿಯಲ್ಲಿ ತಿರುಗಾಟ — ಅಕ್ಷರ ಕೆ.ವಿ.

ಸಂ.೪. ವರ್ಷ ೧ - ಸಂಚಿಕೆ ೪; ನವೆಂಬರ್ ೧೯೮೭

೧. ನೀನಾಸಮ್ ಚಿತ್ರಸಮಾಜ - ಚಲನಚಿತ್ರ ಸಹೃದಯತೆ ಶಿಬಿರ ೯

ಸಂ.೫. ವರ್ಷ ೨ - ಸಂಚಿಕೆ ೧; ಫೆಬ್ರುವರಿ ೧೯೮೮

೧. ಮೂರು ಟಿಪ್ಪಣಿಗಳು — ಕೆ.ವಿ. ಸುಬ್ಬಣ್ಣ

ಸಂ.೬. ವರ್ಷ ೨ - ಸಂಚಿಕೆ ೨; ಮೇ ೧೯೮೮

೧. ಟಿಪ್ಪಣಿ ೧. ವಿದೇಶೀ ನಿರ್ದೇಶಕಿಯ ಮೇಘಸಂದೇಶ — ಕೆ.ವಿ.ಸುಬ್ಬಣ್ಣ

೨. ಟಿಪ್ಪಣಿ ೨. ಬ್ರೂಕ್-ಇಂಡಿಯಾ ಮತ್ತು ಭರೂಚ ಲೇಖನ — ಕೆ.ವಿ. ಸುಬ್ಬಣ್ಣ

ಸಂ.೭. ವರ್ಷ ೨ - ಸಂಚಿಕೆ ೩; ಆಗಸ್ಟ್ ೧೯೮೮

೧. ಕನ್ನಡ ರಂಗಭೂಮಿ: ಹೊಸ ಭರವಸೆಗಳು, ಆಸೆಗಳು — ಜಶವಂತ ಜಾಧವ್

ಸಂ.೮. ವರ್ಷ ೨ - ಸಂಚಿಕೆ ೪; ನವೆಂಬರ್ ೧೯೮೮

೧. ನೆನಪು - ನಮಸ್ಕಾರ (ಕಮಲಾದೇವಿಯವರ ನೆನಪು) — ಕೆ.ವಿ. ಸುಬ್ಬಣ್ಣ

೨. ಪ್ರೊ.ಸತೀಶ ಬಹಾದುರ್‌ಗೆ ಗೌರವ — ಜಶವಂತ ಜಾಧವ್

೩. ಪಿ. ನಾಗೇಶರಾವ್ ಪರಿಚಯ — ಜಶವಂತ ಜಾಧವ್

ಸಂ.೯. ವರ್ಷ ೩ - ಸಂಚಿಕೆ ೧; ಫೆಬ್ರುವರಿ ೧೯೮೯

೧. ಸಫ್ದರ್ ಹಾಶ್ಮಿ — ಜಶವಂತ ಜಾಧವ್

೨. ಜಿ.ಶಂಕರ ಪಿಳ್ಳೆ — ಬಿ.ಆರ್.ವಿ. ಇತಾಳ

೩. ಎರಡು ಸಂಚಾರಿ ರಂಗಘಟಕಗಳು:
ಸೃಷ್ಟಿ ಕೊಡಗುರಂಗ ಮತ್ತು ಚಿಣ್ಣ-ಬಣ್ಣ — ಕೆ.ವಿ.ಸುಬ್ಬಣ್ಣ

ಸಂ.೧೦. ವರ್ಷ ೩ - ಸಂಚಿಕೆ ೨; ಮೇ ೧೯೮೯

ಈ ಸಂಚಿಕೆಯ ಪ್ರತಿ ನೀನಾಸಮ್ ದಾಖಲೆಗಳಲ್ಲಿ ಉಳಿದಿಲ್ಲ. ಯಾವುದೇ ಓದುಗರ ಬಳಿ ಈ ಸಂಚಿಕೆ ಇದ್ದರೆ, ದಯಮಾಡಿ ತಿಳಿಸಬೇಕಾಗಿ ವಿನಂತಿ.

ಸಂ.೧೧. ವರ್ಷ ೩ - ಸಂಚಿಕೆ ೩; ಆಗಸ್ಟ್ ೧೯೮೯

೧. ತ್ರಿಚೂರು ನಾಟಕ ಶಾಲೆ

೨. ಲಾರೆನ್ಸ್ ಆಲಿವಿಯೆರ್, ಶೇಕ್ಸ್ ಪಿಯರ್, ಇತ್ಯಾದಿ — ಜಶವಂತ ಜಾಧವ್



ಸಂ.೧೨. ವರ್ಷ ೩ - ಸಂಚಿಕೆ ೪; ನವೆಂಬರ್ ೧೯೮೯

೧. ಮಾನವೀಯತೆಯನ್ನೇ ಮುಟ್ಟಿ ಮಾತಾಡಿಸುವ
ಜರ್ಮನ್ ರಂಗನಿರ್ದೇಶಕ ಫ್ರಿಟ್ಸ್ ಬೆನೆವಿಟ್ಸ್ — ಕೆ.ವಿ. ಸುಬ್ಬಣ್ಣ

ಸಂ.೧೩. ವರ್ಷ ೪ - ಸಂಚಿಕೆ ೧; ಫೆಬ್ರುವರಿ ೧೯೯೦

೧. ಅಂತರ್ ಸಾಂಸ್ಕೃತಿಕತೆಯ ಅಣಕ: ಪೀಟರ್‌ಬ್ರೂಕ್‌ನ 'ಮಹಾಭಾರತ'
— ಸದಾನಂದ ಮೆನೊನ್; ಅನು: ಕೆ.ವಿ.ಸುಬ್ಬಣ್ಣ

೨. ಗುರು ಮಣಿ ಮಾಧವ ಚಾಕ್ಯಾರ್‌ರಿಗೆ ನಮನ — ಬಿ.ಆರ್.ವಿ. ಇತಾಳ

ಸಂ.೧೪. ವರ್ಷ ೪ - ಸಂಚಿಕೆ ೨; ಮೇ ೧೯೯೦

೧. ಬೆನೆವಿಟ್ಸ್‌ರೊಡನೆ ಒಂದು ತಿಂಗಳು — ನಂದಕುಮಾರ್

೨. ಬಿ.ವಿ. ಕಾರಂತರೊಡನೆ ಒಂದು ಸಂದರ್ಶನ
— ಸಂದರ್ಶಕರು: ಕೀರ್ತಿನಾಥ ಕುರ್ತಕೋಟಿ. (ಕೇಂದ್ರ ಸಂಗೀತನಾಟಕ ಅಕಾಡೆಮಿಯ ನೆಹರೂ ಜನ್ಮಶತಾಬ್ದಿ ನಾಟ್ಯ ಸಮಾರೋಹದ ಸ್ಮರಣಸಂಚಿಕೆ — 'ಕಂಟೆಂಪೊರರಿ ಇಂಡಿಯನ್ ಥಿಯೇಟರ್' ನಿಂದ; ಅನು: ವೆಂಕಟಗಿರಿ ಬೇದೂರು)

ಸಂ.೧೫. ವರ್ಷ ೪ - ಸಂಚಿಕೆ ೩; ಆಗಸ್ಟ್ ೧೯೯೦

೧. ಒಂದು ಹೊಸ ರಂಗತಂಡ: ಕಿನ್ನರ ಮೇಳ — ಬಿ.ಆರ್.ವಿ. ಇತಾಳ

೨. ಗಿರೀಶ ಕಾರ್ನಾಡರೊಂದಿಗೆ ಒಂದು ಸಂದರ್ಶನ
— ಸಂದರ್ಶಕರು: ಕೀರ್ತಿನಾಥ ಕುರ್ತಕೋಟಿ. (ಕೇಂದ್ರ ಸಂಗೀತನಾಟಕ ಅಕಾಡೆಮಿಯ ನೆಹರೂ ಜನ್ಮಶತಾಬ್ದಿ ನಾಟ್ಯ ಸಮಾರೋಹದ ಸ್ಮರಣಸಂಚಿಕೆ — 'ಕಂಟೆಂಪೊರರಿ ಇಂಡಿಯನ್ ಥಿಯೇಟರ್' ನಿಂದ; ಅನು: ವೆಂಕಟಗಿರಿ ಬೇದೂರು)

ಸಂ.೧೬. ವರ್ಷ ೪ - ಸಂಚಿಕೆ ೪; ನವೆಂಬರ್ ೧೯೯೦

೧. ನೀನಾಸಮ್ ಸಂಸ್ಕೃತಿ ಶಿಬಿರ (ಮೊದಲ ಶಿಬಿರದ ವಿಸ್ತೃತ ವರದಿ)
— ಜಶವಂತ ಜಾಧವ್

೨. ನೀನಾಸಮ್ ಶಾಲಾರಂಗ ಯೋಜನೆ

ಸಂ.೧೭. ವರ್ಷ ೫ - ಸಂಚಿಕೆ ೧; ಫೆಬ್ರುವರಿ ೧೯೯೧

೧. ಕಥನ ಮತ್ತು ನಾಟಕ: ಭಾಸನಲ್ಲಿ — ಕೀರ್ತಿನಾಥ ಕುರ್ತಕೋಟಿ

೨. ಕುಮಾರವ್ಯಾಸ ಭಾರತ: ಕುರ್ತಕೋಟಿ ಉಪನ್ಯಾಸಗಳು
(ಕಿರುಟಿಪ್ಪಣಿ) — ಬಿ.ಆರ್.ವಿ. ಇತಾಳ

ಸಂ.೧೮. ವರ್ಷ ೫ - ಸಂಚಿಕೆ ೨; ಮೇ ೧೯೯೧

೧. ತಿರುಗಾಟ ೧೯೯೦: ವರದಿ, ಪ್ರೇಕ್ಷಕ-ಪ್ರತಿಕ್ರಿಯೆಗಳು

೨. ನೀನಾಸಮ್ ಆರ್ಥಿಕ ಸಂಗತಿಗಳು — ಕೆ.ವಿ. ಸುಬ್ಬಣ್ಣ

ಸಂ.೧೯. ವರ್ಷ ೫ - ಸಂಚಿಕೆ ೩; ಆಗಸ್ಟ್ ೧೯೯೧

೧. ಡಾ.ಚಂದ್ರಶೇಖರ ಕಂಬಾರರೊಂದಿಗೆ ಒಂದು ಸಂದರ್ಶನ — ಸಂದರ್ಶಕರು: ಕೀರ್ತಿನಾಥ ಕುರ್ತಕೋಟಿ. (ಕೇಂದ್ರ ಸಂಗೀತನಾಟಕ ಅಕಾಡೆಮಿಯ ನೆಹರೂ ಜನ್ಮಶತಾಬ್ದಿ ನಾಟ್ಯ ಸಮಾರೋಹದ ಸ್ಮರಣಸಂಚಿಕೆ — 'ಕಂಟೆಂಪೊರರಿ ಇಂಡಿಯನ್ ಥಿಯೇಟರ್' ನಿಂದ; ಅನು: ವೆಂಕಟಗಿರಿ ಬೇದೂರು)

ಸಂ.೨೦. ವರ್ಷ ೫ - ಸಂಚಿಕೆ ೪; ನವೆಂಬರ್ ೧೯೯೧

೧. ನೀನಾಸಮ್ ಸಂಸ್ಕೃತಿ ಶಿಬಿರದ ಸಮಾರೋಪ ಭಾಷಣ — ಯು.ಆರ್. ಅನಂತಮೂರ್ತಿ

ಸಂ.೨೧. ವರ್ಷ ೬ - ಸಂಚಿಕೆ ೧; ಫೆಬ್ರುವರಿ ೧೯೯೨

೧. ಗಂಧರ್ವ ಸಂವಹನ — ಕೆ.ವಿ. ಸುಬ್ಬಣ್ಣ

೨. ಉತ್ತರರಾಮಚರಿತ: ಪ್ರಯೋಗ — ಪ್ರಸನ್ನ; ಅನು: ಕೆ.ವಿ.ಸುಬ್ಬಣ್ಣ

೩. ಸತ್ಯಜಿತ್ ರಾಯ್ ಅವರ 'ಅವರ್ ಫಿಲ್ಮ್ಸ್ ದೇರ್ ಫಿಲ್ಮ್ಸ್' ನಿಂದ: ಕಲ್ಕತ್ತಾದಲ್ಲಿ ರೆನ್ವಾ, ಅಕಿರ ಕುರೊಸಾವ — ಅನು: ಜಶವಂತ ಜಾಧವ್

೪. ಪಾರಂಪರಿಕ ಲೋಕನಾಟ್ಯ ಸಮಾರೋಹ — ಬಿ.ಆರ್.ವಿ. ಐತಾಳ

ಸಂ.೨೨. ವರ್ಷ ೬ - ಸಂಚಿಕೆ ೨; ಮೇ ೧೯೯೨

೧. ವೊಯ್‌ಜೆಕ್‌ನ ವಿಚಿತ್ರ ಚರಿತ್ರೆ — ರುಸ್ತಂ ಭರೂಚ; ಅನು: ಕೆ.ವಿ. ಸುಬ್ಬಣ್ಣ

೨. ಮಿಸ್ಟರ್ ಅಲ್ಕಾಜಿಯವರೆ, ಭಾರತ ಬದಲಾಗಿದೆ — ಪ್ರಸನ್ನ; ಅನು: ಬಿ.ಆರ್.ವಿ. ಐತಾಳ

೩. ದಿನನಿತ್ಯದ ಬದುಕೇ ಒಂದು ರಂಗಭೂಮಿ — ಬ್ರೆಕ್ಟ್ ಕವಿತೆ; ಅನು: ಎಸ್. ಮಾಲತಿ

೪. ದೇಶಕ್ಕೊಂದು ಸಾಂಸ್ಕೃತಿಕ ನೀತಿಯ ಬಗ್ಗೆ — ನಿ.ಮುರಾರಿ ಬಲ್ಲಾಳ, ಕೆ.ವಿ.ಸುಬ್ಬಣ್ಣ

೫. ಹ್ಯಾಮ್ಲೆಟ್‌ನ ಸ್ವಗತಗಳು (ಒಂದು ಕಿರುಟಿಪ್ಪಣಿ) — ಬಿ.ಆರ್.ವಿ. ಐತಾಳ

೬. ಧನಂಜಯನ ದಶರೂಪಕ (ಒಂದು ಕಿರುಟಿಪ್ಪಣಿ) — ಬಿ.ಆರ್.ವಿ. ಐತಾಳ



ಸಂ.೨೩. ವರ್ಷ ೬ - ಸಂಚಿಕೆ ೩; ಆಗಸ್ಟ್ ೧೯೯೨

೧. ಸುಭಾಷ್ ಮುಖೋಪಾಧ್ಯಾಯ (ಒಂದು ಪರಿಚಯ) — ಜಶವಂತ ಜಾಧವ್

೨. ಸತ್ಯಜಿತ್ ರಾಯ್ ಬಗ್ಗೆ ಚಿದಾನಂದ ದಾಸಗುಪ್ತಾ — ಅನು: ಜಶವಂತ ಜಾಧವ್

ಸಂ.೨೪. ವರ್ಷ ೬ - ಸಂಚಿಕೆ ೪; ನವೆಂಬರ್ ೧೯೯೨

೧. ಸಂಸ್ಕೃತಿ ಶಿಬಿರ ೯೨ರ ಉದ್ಘಾಟನಾ ಭಾಷಣ — ಅಶೋಕ ವಾಜಪೇಯಿ ಅನು: ಜಶವಂತ ಜಾಧವ್

೨. ಪರಂಪರೆ ಮತ್ತು ಆಧುನಿಕತೆಗಳ ನಡುವೆ ಜೀಕಾಡುತ್ತ — ಗಿರೀಶ ಕಾರ್ನಾಡ

ಸಂ.೨೫. ವರ್ಷ ೭ - ಸಂಚಿಕೆ ೧; ಫೆಬ್ರುವರಿ ೧೯೯೩

೧. ಸಂಗೀತದ ಬಗ್ಗೆ — ಭಾಸ್ಕರ್ ಚಂದಾವರಕರ್; ಅನು: ಜಶವಂತ ಜಾಧವ್

ಸಂ.೨೬. ವರ್ಷ ೭ - ಸಂಚಿಕೆ ೨; ಮೇ ೧೯೯೩

೧. ರಂಗವಾಸ್ತವವಾಗಿ ಸತ್ಯ — ಪ್ರಸನ್ನ; ಅನು: ಜಶವಂತ ಜಾಧವ್

೨. ಸ್ತಾನಿಸ್ಲಾವ್‌ಸ್ಕಿ ಹೊಸಬೆಳಕು — ಬಿ.ಆರ್.ವಿ. ಐತಾಳ

೩. ಆ್ಯಂಟನ್ ಚೆಕಾವ್ ಮತ್ತು ಮಾಸ್ಕೋ ಆರ್ಟ್ಸ್ ಥಿಯೇಟರ್: ಕೆಲವು ನೆನಪುಗಳು — ಕಾನ್‌ಸ್ಟಾಂಟಿನ್ ಸ್ತಾನಿಸ್ಲಾವ್‌ಸ್ಕಿ; ಅನು: ಜಶವಂತ ಜಾಧವ್

ಸಂ.೨೭. ವರ್ಷ ೭ - ಸಂಚಿಕೆ ೩; ಆಗಸ್ಟ್ ೧೯೯೩

೧. ಗೋಕುಲ ನಿರ್ಗಮನ — ಕೆ.ವಿ. ಸುಬ್ಬಣ್ಣ

ಸಂ.೨೮. ವರ್ಷ ೭ - ಸಂಚಿಕೆ ೪; ನವೆಂಬರ್ ೧೯೯೩

೧. ಹಬೀಬ್ ತನ್ವೀರ್: ಒಂದು ಸಂದರ್ಶನ — ರೀಟಾ ಸೋಂಧಿ; ಅನು: ಜಶವಂತ ಜಾಧವ್

ಸಂ.೨೯. ವರ್ಷ ೮ - ಸಂಚಿಕೆ ೧; ಫೆಬ್ರುವರಿ ೧೯೯೪

೧. ಮೂರು ತಿಂಗಳು: ಸಂತೋಷದ ಮಾತು/ ಅಪರೂಪದವರು/ ನಮ್ಮ ನೃತ್ಯ ಸಂಗೀತಗಳಲ್ಲಿ ಹೊಸ ಪ್ರಯೋಗ/ ವಿರೋಧ-ವಿಜ್ಞಾಪನೆಗಳು — ಕೆ.ವಿ. ಸುಬ್ಬಣ್ಣ

೨. ತೋಂಡಿ ಸಂಪ್ರದಾಯ ಮತ್ತು ಆಧುನಿಕ ಕಾವ್ಯ: ವಿಚಾರಸಂಕಿರಣದ ಆಶಯಭಾಷಣ — ಡಾ.ಡಿ.ಆರ್. ನಾಗರಾಜ್

೩. ನಾಟಕಕೃತಿ ಹಾಗೂ ಪ್ರದರ್ಶನ ಪಠ್ಯ – ರುಸ್ತುಂ ಭರೂಚ;
ಅನು: ಬಿ.ಆರ್.ವಿ.ಐತಾಳ

೪. ಹುನಗುಂದ: ಒಂದು ಸಾಂಸ್ಕೃತಿಕ ಭರವಸೆ – ಟಿ.ಪಿ. ಅಶೋಕ

೫. ಮಂಚಿಕೇರಿ ನೆನಪುಗಳು – ಟಿ.ಪಿ. ಅಶೋಕ

೬. ಶೇಕ್ಸ್‌ಪಿಯರ್‌ನ ಒಗಟು – ಇಯಾನ್ ಕಾಟ್; ಅನು: ಜಶವಂತ ಜಾಧವ್

ಸಂ.೩೦. ವರ್ಷ ೮ - ಸಂಚಿಕೆ ೨; ಮೇ ೧೯೯೪

೧. ಮೂರು ತಿಂಗಳು: ಬಾಳಿದ ಮೂವರು/ ವಿಕೇಂದ್ರೀಕರಣದ ಪರಿ – ಕೆ.ವಿ.
ಸುಬ್ಬಣ್ಣ

೨. ನಾಟಕ - ರಂಗಭೂಮಿ - ನಾನು – ಡಾ.ಚಂದ್ರಶೇಖರ ಕಂಬಾರ

೩. ಉದಾರೀಕರಣದ ಭಾರತದಲ್ಲಿ ವೃತ್ತಿನಿರತ ವ್ಯಕ್ತಿ – ವಿ. ಕುರಿಯನ್;
ಅನು: ಜಶವಂತ ಜಾಧವ್

೪. ಜಿಲ್ಲಾ ರಂಗಮಂದಿರ ಇತ್ಯಾದಿ ವಿನ್ಯಾಸಗಳ ಬಗ್ಗೆ ಒಂದು ಸಮಾಲೋಚನೆ

೫. ಹೊಸ ರಂಗಪತ್ರಿಕೆಯೊಂದರ ಆರಂಭ: ಸೀಗಲ್ ಥಿಯೇಟರ್ ಕ್ವಾರ್ಟರ್ಲಿ
– ಅಕ್ಷರ ಕೆ.ವಿ.

ಸಂ.೩೧. ವರ್ಷ ೮ - ಸಂಚಿಕೆ ೩; ಆಗಸ್ಟ್ ೧೯೯೪

೧. ಗಾಯನ ಗಂಗೆ – ರಾ. ಸತ್ಯನಾರಾಯಣ

೨. ಯಕ್ಷಗಾನ ತಾಳಮದ್ದಲೆ ವಿಚಾರಸಂಕಿರಣ:
ಉಪನ್ಯಾಸಗಳು, ಪ್ರತಿಕ್ರಿಯೆಗಳು – ಡಾ.ಬಿ.ಎ. ವಿವೇಕ ರೈ, ಕೆರೆಮನೆ
ಮಹಾಬಲ ಹೆಗಡೆ, ಶೇಣಿ ಗೋಪಾಲಕೃಷ್ಣ ಭಟ್, ಕೆ.ವಿ. ಸುಬ್ಬಣ್ಣ

ಸಂ.೩೨. ವರ್ಷ ೮ - ಸಂಚಿಕೆ ೪; ನವೆಂಬರ್ ೧೯೯೪

೧. ಗ್ರಾಮಭಾರತ: ಸಂಸ್ಕೃತಿ ಶಿಬಿರ ೯೪ರ ಆಶಯಭಾಷಣ
– ಡಾ.ಎಂ.ಎನ್. ಶ್ರೀನಿವಾಸ್; ಅನು: ಜಶವಂತ ಜಾಧವ್

೨. ಮತೀಯವಾದ: ಒಂದು ಚರ್ಚೆ – ಆಶೀಷ್ ನಂದಿ, ಎಂ.ಎನ್.
ಶ್ರೀನಿವಾಸ್, ಗುಲಾಮ್ ಶೇಖ್; ಅನು: ಜಶವಂತ ಜಾಧವ್

ಸಂ.೩೩. ವರ್ಷ ೯ - ಸಂಚಿಕೆ ೧; ಫೆಬ್ರುವರಿ ೧೯೯೫

೧. ನೀನಾಸಮ್ ಹಿನ್ನೆಲೆಯ ಸೆಲೆ – ಕೆ.ವಿ. ಸುಬ್ಬಣ್ಣ

೨. ಒಲಿದು ಬಂದವಳು (ಕೆರೆಮನೆ ಶಿವರಾಮ ಹೆಗಡೆ ಆತ್ಮಕತೆ 'ನೆನಪಿನ
ರಂಗಸ್ಥಳ'ದಿಂದ) – ನಿರೂಪಣೆ: ಡಾ. ಜಿ.ಎಸ್. ಭಟ್

೩. ನಮ್ಮ ಕೊಳೆಗೇರಿಗಳ ಸುಧಾರಣೆಯ ಸಾಧ್ಯತೆಗಳು – ಲಾರಿ ಬೇಕರ್



೪. ಹೆನ್ರಿಕ್ ಇಬ್ಸನ್ – ರಘುನಂದನ

೫. ಈರುಳ್ಳಿಯ ಸಂಕೇತದ ಕೆಳಗೆ – ರುಸ್ತುಂ ಭರೂಚ; ಅನು: ರಘುನಂದನ

೬. ಖೇರ್ ದಂಪತಿಗಳ 'ಸಾಲ್‌ಗಿರ್ಹಾ' – ಕನಕ ಹಾ.ಮ.

ಸಂ.೩೪. ವರ್ಷ ೯ - ಸಂಚಿಕೆ ೨; ಮೇ ೧೯೯೫

೧. ಪ್ರಸ್ತುತ ಭಾರತ ಮತ್ತು ಗ್ರಾಮೀಣ ತತ್ತ್ವ ಪರಿಕಲ್ಪನೆ
– ಆಶೀಷ್ ನಂದಿ; ಅನು: ಜಶವಂತ ಜಾಧವ್

೨. ಡೇರೆ ಮೇಳ (ಕೆರೆಮನೆ ಶಿವರಾಮ ಹೆಗಡೆ ಆತ್ಮಕತೆ 'ನೆನಪಿನ
ರಂಗಸ್ಥಳ'ದಿಂದ) – ನಿರೂಪಣೆ: ಡಾ. ಜಿ.ಎಸ್. ಭಟ್

೩. ಅನುವಾದ ಮತ್ತು ರಂಗಸಂಗೀತ
– ಭಾಸ್ಕರ ಚಂದಾವರಕರ್; ಅನು: ಬಿ.ಆರ್.ವಿ. ಐತಾಳ

೪. ಬಹುಗುಣ ಹೇಳುತ್ತಾರೆ – ಸುಂದರಲಾಲ್ ಬಹುಗುಣ (ಪತ್ರಿಕಾ
ವರದಿಗಳಿಂದ)

ಸಂ.೩೫. ವರ್ಷ ೯ - ಸಂಚಿಕೆ ೩; ಆಗಸ್ಟ್ ೧೯೯೫

೧. ಪ್ರಸ್ತುತ ಭಾರತ ಮತ್ತು ದೇಶೀಯ ಜ್ಞಾನಪರಂಪರೆಗಳು: ಒಂದು ಚರ್ಚೆ
– ಆಶೀಷ್ ನಂದಿ, ಡಿ.ಆರ್. ನಾಗರಾಜ್, ಯು.ಆರ್.
ಅನಂತಮೂರ್ತಿ; ಸಂಗ್ರಹ ಅನುವಾದ: ಜಶವಂತ ಜಾಧವ್

ಸಂ.೩೬. ವರ್ಷ ೯ - ಸಂಚಿಕೆ ೪; ನವೆಂಬರ್ ೧೯೯೫

೧. ಈಯಿಬ್ಬರು: ೧. ನಮ್ಮ ರಾಮಪ್ಪ – ಕೆ.ವಿ. ಸುಬ್ಬಣ್ಣ; ೨. ನಮ್ಮ ಜರ್ಮನಿ
– ಕೆ.ವಿ. ಸುಬ್ಬಣ್ಣ

೨. ಕಪಟವರಿಯದ ಆತ್ಮಕಥನ – ಡಾ. ಕೆ. ಶಿವರಾಮ ಕಾರಂತ

೩. ಜಯ್ ಸಹನಾ – ರಾಮಚಂದ್ರ ಗಾಂಧಿ; ಅನು: ಕೆ.ವಿ. ಸುಬ್ಬಣ್ಣ

೪. ಬದುಕು ಹಣ್ಣಾಗಿ ಮೂಡಿದ ನಾಟಕ: ದ.ರಾ. ಬೇಂದ್ರೆಯವರ 'ಹೊಸ
ಸಂಸಾರ' – ಅಕ್ಷರ ಕೆ.ವಿ.

೫. ಭಾರತೀಯ ನಾಸ್ತಿಕ ದರ್ಶನಗಳು – ಡಾ. ಡಿ.ಆರ್. ನಾಗರಾಜ್

ಸಂ.೩೭. ವರ್ಷ ೧೦ - ಸಂಚಿಕೆ ೧; ಫೆಬ್ರುವರಿ ೧೯೯೬

೧. ದೇವ-ದೇವಿಯರ ಜಗತ್ತು – ಆಶೀಷ್ ನಂದಿ; ಅನು: ಅಕ್ಷರ ಕೆ.ವಿ.

೨. ದೈವಸಂಕರ – ಡಾ. ಡಿ.ಆರ್. ನಾಗರಾಜ್

೩. ರೋಗ, ಚಿಕಿತ್ಸೆ ಮತ್ತು ಗುಣಮುಖ: ಲಂಕೇಶರ ನಾಟಕಗಳ ಒಂದು
ತಾತ್ವಿಕ ನಕ್ಷೆ – ಅಕ್ಷರ ಕೆ.ವಿ.

ಸಂ.೩೮. ವರ್ಷ ೧೦ - ಸಂಚಿಕೆ ೨; ಮೇ ೧೯೯೬

೧. ಬಡತನದ ವ್ರತ — ಮೋ.ಕ. ಗಾಂಧಿ; ಅನು: ಜಶವಂತ ಜಾಧವ್

೨. ಭಾರತೀಯವೆನ್ನುವ ಒಂದು ಜೀವನಕ್ರಮ ಇದೆಯೇ?
— ಎ.ಕೆ. ರಾಮಾನುಜನ್; ಅನು: ಕೆ.ವಿ. ಸುಬ್ಬಣ್ಣ

೩. ಪು.ತಿ.ನ. ಅವರ ಅಹಲ್ಯೆ: ಸತತ ಬಿನದದ ಜೀವನಕ್ರಮಕ್ಕೆ ಒಂದು ಸವಾಲು
— ಅಕ್ಷರ ಕೆ.ವಿ.

ಸಂ.೩೯. ವರ್ಷ ೧೦ - ಸಂಚಿಕೆ ೩; ಆಗಸ್ಟ್ ೧೯೯೬

೧. ಕಾರಂತರು ಮತ್ತು ದಕ್ಷಿಣಕನ್ನಡತನ — ಜಿ. ರಾಜಶೇಖರ

೨. ಸೌಂದರ್ಯಸ್ಪರ್ಧೆಯನ್ನು ಪ್ರತಿಭಟಿಸುವುದೇತಕ್ಕೆ?
— ಕೆ.ವಿ. ಸುಬ್ಬಣ್ಣ

೩. ಗೃಹಸ್ಥ ಜೀವನದ ಒಂದು ಅಧ್ಯಾಯ
— ಮೋ.ಕ. ಗಾಂಧಿ; ಅನು: ಜಶವಂತ ಜಾಧವ್

೪. ನೀನಾಸಮ್ ಪ್ರತಿಷ್ಠಾನದ ಒಂದು ಸಮಗ್ರ ನೋಟ

ಸಂ.೪೦. ವರ್ಷ ೧೦ - ಸಂಚಿಕೆ ೪; ನವೆಂಬರ್ ೧೯೯೬

೧. ಶಿವಾಪುರದ ದೇವ-ದೇವಿಯರು — ಡಾ. ಚಂದ್ರಶೇಖರ ಕಂಬಾರ

೨. ಪರಮಾಣು ಮತ್ತು ಆತ್ಮ
— ಪ್ರೊ.ಡಿ.ಎಸ್. ಕೊಠಾರಿ; ಅನು: ಕೆ.ವಿ.ಸುಬ್ಬಣ್ಣ

೩. ಗಿಳಿಪಾಠದ ನೆನಪು - ಅರ್ಥಾತ್ - ಬಿ.ವಿ. ಕಾರಂತರಿಗೊಂದು ಅಭಿವಂದನೆ
— ಅಕ್ಷರ ಕೆ.ವಿ.

೪. ಭ್ರಮ್ಯಮಾನ: ಅಸ್ಸಾಮಿನ ಸಂಚಾರಿ ರಂಗಭೂಮಿ
— ಬಿ.ಆರ್.ವಿ. ಐತಾಳ

ಸಂ.೪೧. ವರ್ಷ ೧೧ - ಸಂಚಿಕೆ ೧; ಫೆಬ್ರುವರಿ ೧೯೯೭

೧. ಕಂಬನಿ: ಪಾರಿಜಾತದ ಲೋಕಾಪುರ ದೇಶಪಾಂಡೆ

೨. ನಾಗರಿಕ / ಸೈನಿಕ — ಗಿರೀಶ ಕಾರ್ನಾಡ

೩. ಛದ್ಮವೇಷ ಮತ್ತು ಛತ್ರಪತಿತ್ವ: ಸಾಹಿತ್ಯ ಚರಿತ್ರೆಯಲ್ಲಿ ಛಂದೋರೂಪದ
ವಾಗ್ವಾದ — ಡಾ. ಡಿ.ಆರ್. ನಾಗರಾಜ್

೪. ಅಡಕೆಯ ಮಾನ — ಕೆ.ವಿ. ಸುಬ್ಬಣ್ಣ

೫. ಅಭಿನಯದ ಬಗ್ಗೆ — ಡಾ. ಅನುರಾಧಾ ಕಪೂರ್; ಅನು: ಅಕ್ಷರ ಕೆ.ವಿ.

೬. ನೀನಾಸಮ್ ಸಂಗೀತ ಸಹೃದಯತೆ ಶಿಬಿರ (ಒಂದು ವರದಿ)





ಸಂ.೪೨. ವರ್ಷ ೧೧ - ಸಂಚಿಕೆ ೨; ಮೇ ೧೯೯೭

೧. ಕನ್ನಡ ಸಾಹಿತ್ಯದ ಕೆಲವು ಮುಖ್ಯ ವಾಗ್ವಾದಗಳು: ಭಾಗ ೨: ಕುವೆಂಪು -
ಮಾಸ್ತಿ — ಡಾ. ಬಸವರಾಜ ಕಲ್ಗುಡಿ

೨. ಭವಕೇರಳ - ಭಾವಕೇರಳ — ಕೆ.ವಿ. ಸುಬ್ಬಣ್ಣ

೩. ಐತಿಹ್ಯಮಾಲೆಯ ಕಥೆಗಳು: ೧. ಅಮ್ಮನ್ನೂರು ಪರಮೇಶ್ವರ ಚಾಕ್ಯಾರ್,
೨. ಕುಂಚನ್ ನಂಬ್ಯಾರ್ ಉದಯಿಸಿದ್ದು, ೩. ಕಪ್ಲಿಂಗಾಟು ನಂಬೂದಿರಿ
ಮತ್ತು ದೇಶಮಂಗಲದ ವಾರಿಯರ್
— ಕೊಟ್ಟಾರತ್ತಿಲ್ ಶಂಕುಣ್ಣಿ; ಅನು: ಬಿ.ಆರ್.ವಿ. ಐತಾಳ

೪. ದ ಕಾಮೆಡಿ ಆಫ್ ಎರರ್ಸ್: ಒಂದು ವಿಮರ್ಶೆ
— ಎ.ಆರ್. ನಾಗಭೂಷಣ

೫. ನೀನಾಸಮ್ ತಿರುಗಾಟ ೯೬ರ ಒಂದು ಸವಿವರ ವರದಿ — ಅಕ್ಷರ ಕೆ.ವಿ.

ಸಂ.೪೩. ವರ್ಷ ೧೧ - ಸಂಚಿಕೆ ೩; ಆಗಸ್ಟ್ ೧೯೯೭

೧. ಗಾಂಧೀಜಿ: ಬನಾರಸ್ ಭಾಷಣ: ೧೯೧೬ — ಅನು: ಕೆ.ವಿ. ಸುಬ್ಬಣ್ಣ

೨. ಧೈರ್ಯದ ತಾಯಿ (ದಿ.ಚಿ.ನ. ಮಂಗಳ ಅವರ ನೆನಪು)
— ಎಸ್. ಸುಚಿತ್ರಲತಾ; ಅನು: ಎಲ್.ಜಿ. ಮೀರಾ

೩. ಠಾಕೂರರ ಅಸ್ತಿವಾರದ ಮೇಲೆ — ಶಂಭುಮಿತ್ರ; ಅನು: ಕೆ.ವಿ. ಸುಬ್ಬಣ್ಣ

೪. ಕನ್ನಡ ಸಾಹಿತ್ಯದ ಕೆಲವು ಮುಖ್ಯ ವಾಗ್ವಾದಗಳು:
ನವ್ಯ ಚಳವಳಿಗೆ ಸಂಬಂಧಿಸಿ — ಡಾ. ಡಿ.ಆರ್. ನಾಗರಾಜ್

೫. ಐತಿಹ್ಯಮಾಲೆಯ ಕಥೆಗಳು: ೧. ಮಹಾಭಾಷ್ಯ, ೨. ಭವಭೂತಿ
— ಕೊಟ್ಟಾರತ್ತಿಲ್ ಶಂಕುಣ್ಣಿ; ಅನು: ಬಿ.ಆರ್.ವಿ. ಐತಾಳ

ಸಂ.೪೪. ವರ್ಷ ೧೧ - ಸಂಚಿಕೆ ೪; ನವೆಂಬರ್ ೧೯೯೭

೧. ಸುಬ್ಬರಾಯರು — ಕೆ.ವಿ. ಸುಬ್ಬಣ್ಣ

೨. ನಮ್ಮ ಭಾಗೀರಥಿ

೩. ನದಿಯ ಮೇಲೆ ನೆಲದ ಚಿಂತೆ — ಮೋ.ಕ. ಗಾಂಧಿ; ಅನು: ಕೆ.ವಿ. ಸುಬ್ಬಣ್ಣ

೪. ತಿರುಗಾಟ ೯೬: ಒಂದು ವಿಮರ್ಶೆ — ಎ.ಆರ್. ನಾಗಭೂಷಣ

೫. ಒಳದನಿಗೆ ಓಗೊಟ್ಟವರು: ಬ್ರಿಟಿಷ್ ಸಾಮ್ರಾಜ್ಯದ ಇನ್ನೊಂದು ಮುಖ
— ರಾಮಚಂದ್ರ ಗುಹಾ; ಅನು: ಜಶವಂತ ಜಾಧವ್

೬. ಜೇಡರ ಹುಡುಗಿಯ ಮೃತ್ಯುಚುಂಬನ: ರೂಪಕದಾಚೆಗಿನ ರೂಪಕ
— ವಿಜಯ ಪದಕಿ; ಅನು: ಅಕ್ಷರ ಕೆ.ವಿ.

೭. ಐತಿಹ್ಯಮಾಲೆಯ ಕಥೆಗಳು: ಭರ್ತೃಹರಿ
— ಕೊಟ್ಟಾರತ್ತಿಲ್ ಶಂಕುಣ್ಣಿ; ಅನು: ಬಿ.ಆರ್.ವಿ. ಐತಾಳ

ಸಂ.೪೫. ವರ್ಷ ೧೨ - ಸಂಚಿಕೆ ೧; ಫೆಬ್ರುವರಿ ೧೯೯೮
೧. ಎಲ್ಲಿ ಹೋದರೋ ಅವರು ಎಂದು ಬರುವರು ? — ವೈದೇಹಿ
೨. ಜಾತಿ ಕುರಿತು ಗಾಂಧಿ ಚಿಂತನೆಯಲ್ಲಾದ ಬದಲಾವಣೆ
— ಮಾರ್ಕ್ಸ್ ಲಿಂಡ್‌ಲೇ; ಅನು: ಕೆ.ವಿ. ಸುಬ್ಬಣ್ಣ
೩. ಬಿದಿರಿನ ಮನೆ — ಶಿವ ವಿಶ್ವನಾಥನ್; ಅನು: ಅಕ್ಷರ ಕೆ.ವಿ.
೪. ಐತಿಹ್ಯಮಾಲೆಯ ಕಥೆಗಳು: 'ವಿಡ್ಡಿ ಕೂಷ್ಮಾಂಡಂ'
— ಕೊಟ್ಟಾರತ್ತಿಲ್ ಶಂಕುಣ್ಣಿ; ಅನು: ಬಿ.ಆರ್.ವಿ. ಐತಾಳ

ಸಂ.೪೬. ವರ್ಷ ೧೨ - ಸಂಚಿಕೆ ೨; ಮೇ ೧೯೯೮
೧. ಮೂಕ ಸಹ್ಯಾದ್ರಿಗೆ ಮಾತು ಕೊಟ್ಟವಳು — ಕೆ.ವಿ. ಸುಬ್ಬಣ್ಣ
೨. ಮನು ಸಮ್ಮುಖದಲ್ಲಿ ಸ್ವಗತ — ಮೋ.ಕ. ಗಾಂಧಿ; ಅನು: ಕೆ.ವಿ. ಸುಬ್ಬಣ್ಣ
೩. ನೂರೊಂದು ನಿಷ್ಠೆ - ನೂರೊಂದು ರಾಷ್ಟ್ರ:ಸಂಕ್ರಮಣಾವಸ್ಥೆಯಲ್ಲಿ
ರಾಷ್ಟ್ರಪ್ರಭುತ್ವಗಳು — ಡಾ. ಡಿ.ಆರ್. ನಾಗರಾಜ್
೪. ಐತಿಹ್ಯಮಾಲೆಯ ಕಥೆಗಳು: ಅಧ್ಯಾತ್ಮ ರಾಮಾಯಣ
— ಕೊಟ್ಟಾರತ್ತಿಲ್ ಶಂಕುಣ್ಣಿ; ಅನು: ಬಿ.ಆರ್.ವಿ. ಐತಾಳ
೫. ಕೂಡಿಯಾಟ್ಟಂನಲ್ಲಿ ಸ್ತ್ರೀಯರ ಪಾತ್ರ:
ಪುಸ್ತಕದ ಅವಲೋಕನ — ಬಿ.ಆರ್.ವಿ.ಐತಾಳ
೬. ರಾಷ್ಟ್ರೀಯ ರಂಗಸಂವಾದ: ಇವತ್ತಿನ ಭಾರತದಲ್ಲಿ ರಂಗಪ್ರಯೋಗ:
(ಒಂದು ವರದಿ) — ನಿರೂಪಣೆ: ಅಕ್ಷರ ಕೆ.ವಿ. ಮತ್ತು
ಬಿ.ಆರ್.ವಿ.ಐತಾಳ
೭. ನೀನಾಸಮ್ ಪ್ರತಿಷ್ಠಾನ: ಐವತ್ತನೆಯ ಕಾರ್ಯಕ್ರಮದ ಹೊಸ್ತಿಲಲ್ಲಿ
(ಒಂದು ಸವಿವರ ವರದಿ) — ಟಿ.ಪಿ. ಅಶೋಕ ಮತ್ತು
ಬಿ.ಆರ್.ವಿ.ಐತಾಳ

ಸಂ.೪೭. ವರ್ಷ ೧೨ - ಸಂಚಿಕೆ ೩; ಆಗಸ್ಟ್ ೧೯೯೮
೧. ಬುದ್ಧ ಮುಗುಳು ನಗುತ್ತಿಲ್ಲ — ರುಸ್ತುಂ ಭರೂಚ; ಅನು: ನಿ. ಮುರಾರಿ
ಬಲ್ಲಾಳ
೨. ವಿಜ್ಞಾನ, ವಸಾಹತುಶಾಹಿ ಹಾಗೂ ಹಿಂಸೆ (ಭಾಗ - ೧)
— ಕ್ಲಾಡ್ ಆಳ್ವಾರೆಸ್; ಸಂಗ್ರಹಾನುವಾದ: ಜಶವಂತ ಜಾಧವ್



೩. ಐತಿಹ್ಯಮಾಲೆಯ ಕಥೆಗಳು:
೧. ಪಾಕ್ಕನಾರ್ ಪತ್ನಿಯ ಪಾತಿವ್ರತ್ಯ, ೨. ಶ್ರೀಕೃಷ್ಣಕರ್ಣಾಮೃತಂ
— ಕೊಟ್ಟಾರತ್ತಿಲ್ ಶಂಕುಣ್ಣಿ; ಅನು: ಬಿ.ಆರ್.ವಿ. ಐತಾಳ

ಸಂ.೪೮. ವರ್ಷ ೧೨ - ಸಂಚಿಕೆ ೪; ನವೆಂಬರ್ ೧೯೯೮
೧. ಒಂದು ಜಗತ್ತಿನಿಂದ ಇನ್ನೊಂದಕ್ಕೆ (ಡಿ.ಆರ್. ನಾಗರಾಜ್ ನೆನಪು)
— ರಾಮಚಂದ್ರ ಗುಹಾ; ಅನು: ಮಾಧವ ಐತಾಳ
೨. ವಿಜ್ಞಾನ, ವಸಾಹತುಶಾಹಿ ಹಾಗೂ ಹಿಂಸೆ (ಭಾಗ - ೨)
— ಕ್ಲಾಡ್ ಆಳ್ವಾರೆಸ್; ಸಂಗ್ರಹಾನುವಾದ: ಜಶವಂತ ಜಾಧವ್
೩. ಅಪೂರ್ವ ಅಭಿನೇತ್ರಿ: ತೃಪ್ತಿ ಮಿತ್ರ — ಜ್ಯೋತ್ಸ್ನಾ ಕಾಮತ್
೪. ಪುಟ್ಟ ಪಟ್ಟಣದಲ್ಲೊಂದು ನಾಟಕ ಪ್ರಯೋಗ
— ಎ. ಆರ್. ನಾಗಭೂಷಣ

ಸಂ.೪೯. ವರ್ಷ ೧೩ - ಸಂಚಿಕೆ ೧; ಫೆಬ್ರುವರಿ ೧೯೯೯
೧. ಆತಂಕಿತ ಹಿಂದೂ ಮತ್ತು ಕುಪಿತ ರೈತ: ಜಾಗತೀಕರಣದ ಪ್ರಕ್ರಿಯೆಗೆ
ಭಾರತದ ಪ್ರತಿಸ್ಪಂದನೆಯ ಎರಡು ರೂಪಗಳು
— ಡಾ. ಡಿ.ಆರ್. ನಾಗರಾಜ್; ಸಂಗ್ರಹಾನುವಾದ:
ಜಶವಂತ ಜಾಧವ್
೨. ಐತಿಹ್ಯಮಾಲೆಯ ಕಥೆಗಳು:
೧. ಮಣ್ಣಾರಶಾಲ ಮಹಾತ್ಮೆ, ೨. ಅರಲ್ಕಲ್ ಬೀಬಿ
— ಕೊಟ್ಟಾರತ್ತಿಲ್ ಶಂಕುಣ್ಣಿ; ಅನು: ಬಿ.ಆರ್.ವಿ. ಐತಾಳ

ಸಂ.೫೦. ವರ್ಷ ೧೩ - ಸಂಚಿಕೆ ೨; ಮೇ ೧೯೯೯
೧. ಆಚಾರ್ಯನೊಬ್ಬನ ಅಸ್ತಮಾನ: ಜೆರ್ರಿ ಗ್ರೊಟೋವ್‌ಸ್ಕಿ
— ಅಕ್ಷರ ಕೆ.ವಿ.
೨. ಸೋಮನಾಥ: ಇತಿಹಾಸ ಮತ್ತು ಕಥನಗಳು
— ರೋಮಿಲಾ ಥಾಪರ್; ಅನು: ಬಿ.ಆರ್.ವಿ. ಐತಾಳ

ಸಂ.೫೧. ವರ್ಷ ೧೩ - ಸಂಚಿಕೆ ೩; ಆಗಸ್ಟ್ ೧೯೯೯
